◈ ಯಕ್ಷಗಾನಕ್ಕೆ ಸುದಿನಗಳು ಬರುವ ಚಿಹ್ನೆಗಳು ಈಗಲೀಗ ಗೋಚರಿಸುತ್ತಿವೆಯಷ್ಟೆ. ಆದರೆ ಹಲವರು ಅದೀಗ ಅಭಿವೃದ್ಧಿಯ ಪರಾ- ಕಾಷ್ಠೆಯನ್ನು ಮುಟ್ಟಿತು; ಆ ಸಭೆಯು ಆದರ್ಶವಾಯಿತು; ಈ ಸಭೆಯು ಪರಮೋತ್ತಮವಾಯಿತು – ಎಂದು ಹೆಮ್ಮೆಪಟ್ಟುಕೊಳ್ಳುತ್ತಾರೆ; ಪದಕಟ್ಟಿ ಹಾಡುತ್ತಾರೆ; ಬಿರುದಿನ ಹೊರೆಗಳನ್ನು ಹೊರುತ್ತಾರೆ. ಪರಿಶೀಲಿಸಿದರೆ ಸುಧಾರಣೆಯಾಗಬೇಕಾದ ಬಹ್ವಂಶಗಳು ಅಥವಾ ಎಲ್ಲವೂ ಹಾಗೆಯೇ ಉಳಿದಿವೆಯೆಂದರೆ ರಸಜ್ಞರೂ ನಿಷ್ಪಕ್ಷಪಾತಿಗಳೂ ಅಲ್ಲವೆಂದು ಹೇಳಲಾರರು. ಅದು ಒಂದೆರಡು ದಿನಗಳಲ್ಲಿ, ತಿಂಗಳಲ್ಲಿ, ವರ್ಷದಲ್ಲಿ ಸಾಧ್ಯವಾಗುವುದಲ್ಲ; ಹಲವು ವರ್ಷಗಳ ನಿರಂತರಪ್ರಯತ್ನದಿಂದ ಉಜ್ಜ್ವಲದಶೆಯನ್ನು ಹೊಂದಬೇಕು.

– ಸೇಡಿಯಾಪು ಕೃಷ್ಣ ಭಟ್ಟ
'ಸ್ವರ್ಣಕಮಲ', ಪು. ೧೧೧

◈ ಕಲೆ ಮೂಲತಃ ಪರಿವರ್ತನಶೀಲವೂ ಹೌದು. ಪ್ರತಿಯೊಂದು ತಲೆಮಾರು ಕಲೆಗೆ ತನ್ನ ಕೊಡುಗೆಯನ್ನು ಕೊಡುತ್ತ ಹೋದಂತೆ ಕಲೆಯಲ್ಲಿ ಪರಿವರ್ತನೆ ಜರಗುತ್ತದೆ. ಕಲಾವಿದರು ತಮ್ಮ ಅನುಭವವನ್ನು ತಮ್ಮ ಯೋಗ್ಯ- ತಾನುಸಾರ ಅಳವಡಿಸಿ, ಕಲೆಯನ್ನೂ ಮಾಧ್ಯಮಗಳನ್ನೂ ಸಶಕ್ತಗೊಳಿಸುವ ಯತ್ನ ನಡೆಸುತ್ತಾರೆ. ಕಲಾವಿದನ ಶಕ್ತಿ, ಕಲೆಯ ಕಲಾಮೌಲ್ಯಗಳನ್ನು ಅನುಸರಿಸಿ– – ಇಂತಹ ಪ್ರಯತ್ನಗಳ ಯಶಸ್ಸು ಯಾ ಸೋಲು ನಿರ್ಧರಿಸಲ್ಪಡುತ್ತದೆ.

– ಕೆರೆಮನೆ ಮಹಾಬಲ ಹೆಗಡೆ
'ಯಕ್ಷಗಾನ ಮಕರಂದ' ಪು. ೨೦೧

◈ ಈ ಶತಮಾನದಲ್ಲಾದ ಮಹಾಯುದ್ಧದ ಹಿಂದುಮುಂದುಗಳಲ್ಲಿ ಮಾರುಕಟ್ಟೆಗೆ ಸೇರಿದ ಬಹುಬಗೆಯ ಸರಕುಗಳು, ಜನಸಂಖ್ಯಾ ಸ್ಫೋಟ, ಜನರ ಸಾಮಾಜಿಕ ಆರ್ಥಿಕ ಸ್ಥಿತ್ಯಂತರ, ಅಭಿರುಚಿಯ ಬದಲಾವಣೆ ಮತ್ತು ಅನ್ಯ ಮಾಧ್ಯಮಗಳ ಪ್ರಭಾವ – ಇವುಗಳ ಒಟ್ಟು ಪರಿಣಾಮದ ಫಲ – ಯಕ್ಷಗಾನದ ಪರಿವರ್ತನೆ.

– ಡಾ. ರಾಘವ ನಂಬಿಯಾರ್
'ವಿಲೋಕನ', ಪು. ೨



# ಯಕ್ಷಗಾನ ಆಕರ ಗ್ರಂಥಸೂಚಿ

ಯಕ್ಷಗಾನದ ಬಗೆಗೆ ಇಪ್ಪತ್ತನೆಯ ಶತಮಾನದಲ್ಲಿ ಅಧ್ಯಯನ ತೊಡಗಿತು. ಯಕ್ಷಗಾನಪ್ರಸಂಗಗಳೂ ಆ ಕಾಲದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಬಂದುವು; ಯಕ್ಷಗಾನದ್ದ ಬಗೆಗೆ ಆ ಕಾಲದಲ್ಲಿ ಹೆಚ್ಚು ಪುಸ್ತಕಗಳೂ ಬಂದುವು. ಅನೇಕರು ಯಕ್ಷಗಾನದ ಪರಿಚಯ, ವಿಶ್ಲೇಷಣೆ, ವಿಮರ್ಶೆ, ಸಂಶೋಧನೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಬರೆದರು. ಯಕ್ಷಗಾನ ಕಲಾವಿದರ ಅಭಿನಂದನ ಮತ್ತು ಸಂಸ್ಮರಣ ಗ್ರಂಥಗಳು ಬಂದುವು. ಅವುಗಳಲ್ಲೂ ಅನೇಕ ಲೇಖನಗಳು ಪ್ರಕಟಗೊಂಡುವು. ಕೆಲವು ಲೇಖಕರ ಸಾಂದರ್ಭಿಕ ಮತ್ತು ವಿಮರ್ಶಾತ್ಮಕ ಬಿಡಿಬರಹಗಳು ಒಟ್ಟಾಗಿ ಪುಸ್ತಕರೂಪದಲ್ಲಿ ಬಂದುವು. ಎಷ್ಟೋ ಬರಹಗಾರರ ಪ್ರಬಂಧಗಳು ಪುಸ್ತಕರೂಪದಲ್ಲಿ ಬಾರದೆ ಹಾಗೆಯೇ ಉಳಿದುವು.

ಹೀಗೆ ಸಮಗ್ರ ಯಕ್ಷಗಾನದ ಬಗೆಗೆ ಬಂದ ಅಥವಾ ಲೇಖನ ಸಂಕಲನಗಳಾಗಿ ಬಂದ ಪುಸ್ತಕಗಳು ಯಕ್ಷಗಾನದ ಬಗೆಗಿನ ಪರಾಮರ್ಶನ ಗ್ರಂಥಗಳಾಗಿ ದೊರಕುತ್ತವೆ. ಆದರೆ ಆ ಕೃತಿಗಳ ವಿವರಗಳು ಒಂದೆಡೆ ದೊರಕುವಂತೆ ಹೆಚ್ಚಿನ ಯತ್ನ ನಡೆದಿಲ್ಲ.

ಇದೀಗ ಯಕ್ಷಗಾನದ ಬಗೆಗೆ ಬಂದ ಕೃತಿಗಳ ವಿವರಣಾತ್ಮಕ ಸೂಚಿಯನ್ನು ಸಿದ್ಧಪಡಿಸಲಾಗಿದೆ. ಈ ಸೂಚಿಯಲ್ಲಿ ಮೊದಲಿಗೆ ಕೃತಿಯ ಹೆಸರು (ದಪ್ಪ ಅಕ್ಷರಗಳಲ್ಲಿ), ಅನಂತರ ಲೇಖಕ/ಸಂಪಾದಕರ/ಪ್ರಧಾನಸಂಪಾದಕರ ಹೆಸರು, ಅನಂತರ ಪ್ರಕಾಶಕರ ವಿವರ, ಮುದ್ರಣವಿವರ (ಪ್ರ = ಪ್ರಥಮ ಮುದ್ರಣ; ದ್ವಿ = ದ್ವಿತೀಯ ಮುದ್ರಣ), ಪುಟಸಂಖ್ಯೆ – ಈ ಮಾಹಿತಿಗಳನ್ನು ನೀಡಲಾಗಿದ್ದು ಮುಂದೆ ಪುಸ್ತಕದೊಳಗೆ ಏನಿದೆಯೆಂಬುದನ್ನು ಸಂಕ್ಷಿಪ್ತವಾಗಿ ಕೆಲವೇ ವಾಕ್ಯಗಳಲ್ಲಿ ನಿರೂಪಿಸಿದೆ.

ಪುಸ್ತಕರೂಪವಾಗಿ ಬಂದ ಚಿಕ್ಕ (ಕೆಲವು ಬಾರಿ ಅಮುಖ್ಯವೆನ್ನಬಹುದಾದ) ಪುಸ್ತಕಗಳನ್ನಾದರೂ ಸೇರಿಸಿಕೊಳ್ಳಲಾಗಿದೆ. (ಉದಾ – ಬಾ. ಸಾಮಗ ಮಲ್ಪೆಯವರು 12–14 ಪುಟಗಳ ಚಿಕ್ಕ ಚಿಕ್ಕ ಪುಸ್ತಕಗಳನ್ನು ಪ್ರಕಟಿಸಿದ್ದುಂಟು.) ಅವುಗಳನ್ನು ಪ್ರತ್ಯೇಕ ಪುಸ್ತಕಗಳೆಂದೇ ಪರಿಗಣಿಸಲಾಗಿದೆ. ಸ್ಮರಣಸಂಚಿಕೆಗಳನ್ನು ಈ ಸೂಚಿಗೆ ಸೇರಿಸಿ- ಕೊಂಡಿಲ್ಲ. ಯಕ್ಷಗಾನವು ಹರಡಿರುವ ಪ್ರದೇಶದುದ್ದಕ್ಕೂ ವಿವಿಧ ಯಕ್ಷಗಾನಸಂಬಂಧಿ ಕಾರ್ಯಕ್ರಮಗಳಲ್ಲಿ ಚಿಕ್ಕ ದೊಡ್ಡ ಗಾತ್ರದ ಬಹಳಷ್ಟು ಸ್ಮರಣಸಂಚಿಕೆಗಳು ಬಂದಿವೆ. ಅವುಗಳಲ್ಲಿ ಎಷ್ಟೋ ಸಂಚಿಕೆಗಳು ಕೃತಿರೂಪದಲ್ಲಿ ಬಂದ ಬರಹಗಳಿಗಿಂತ ಹೆಚ್ಚಿನ ಮಾಹಿತಿಯುಳ್ಳವುಗಳಿರಲೂಬಹುದು. ಆದರೆ ಆ ಬಗೆಗೆ ಮಾಹಿತಿಗಳ ಕೊರತೆಯಿಂದಾಗಿ ಸಂಚಿಕೆಗಳನ್ನು ಬಿಟ್ಟು ಕೃತಿರೂಪದವುಗಳನ್ನು ಮಾತ್ರವೇ ಪರಿಗಣಿಸಿದೆ. ಅಪ್ರಕಟಿತವಾದ ಪಿಎಚ್.ಡಿ., ಎಂ.ಫಿಲ್. ನಿಬಂಧ ಇತ್ಯಾದಿಗಳನ್ನೂ ಇಲ್ಲಿ ಸೇರಿಸಿಕೊಂಡಿಲ್ಲ. ಸಂಪಾದಿತವಾಗಿ ಬಂದ ಯಕ್ಷಗಾನ ಪ್ರಸಂಗಗಳನ್ನೂ (ಉದಾ: ಪಾರ್ತಿಸುಬ್ಬನ ಯಕ್ಷಗಾನಗಳು – ಸಂ. ಕುಕ್ಕಿಲ ಕೃಷ್ಣ ಭಟ್ಟ, ಹಟ್ಟಿಯಂಗಡಿ ರಾಮಭಟ್ಟರ ಯಕ್ಷಗಾನ ಕೃತಿಗಳು – ಸಂ. ಪಾದೇಕಲ್ಲು ವಿಷ್ಣು ಭಟ್ಟ ಇತ್ಯಾದಿ) ಈ ಆಕರಗ್ರಂಥಸೂಚಿಯಲ್ಲಿ

ಇಡಗುಂಜಿ ಮೇಳದ ಪರಿಚಯ, ಇತಿಹಾಸ, ಕಲಾವಿದರ ವಿವರ ಸಾಧನೆಗಳ ಸಂಕ್ಷಿಪ್ತ ನಿರೂಪಣೆ. ಪರಿಚಯಾತ್ಮಕ ಕೃತಿ.

**ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಕಲಾವಿದರು**
ವಿಘ್ನೇಶ್ವರ ಶರ್ಮಾ, ತದ್ದಲಸೆ
ಒಂದಾಣೆ ಮಾಲೆ, ಮಂಗಳೂರು
ಪ್ರ. 1956 ಪು. 17
ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಕಲಾವಿದರ ಪರಿಚಯವುಳ್ಳ ಕಿರು ಹೊತ್ತಗೆ. 17 ಮಂದಿ ಅಂದಿನ ಹಿರಿಯ ಕಿರಿಯ ಕಲಾವಿದರ ಪರಿಚಯವಿದೆ.

**ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಮಂಡಲಿಗಳು**
ಮಂಜುನಾಥ ಭಾಗವತ, ಕಡತೋಕಾ
ಒಂದಾಣೆ ಮಾಲೆ, ಮಂಗಳೂರು
ಪ್ರ. 1957 ಪು. 13
ಉ.ಕ. ಜಿಲ್ಲೆಯ ಯಕ್ಷಗಾನ ಮೇಳಗಳು ಮತ್ತು ಅವುಗಳಲ್ಲಿರುವ ಕಲಾವಿದರ ವಿವರಗಳನ್ನು ನೀಡುವ ಕಿರುಹೊತ್ತಗೆ.

**ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ರಂಗಭೂಮಿ**
ಡಾ. ಜಿ. ಎಂ. ಹೆಗಡೆ
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಪ್ರ. 1996 ಪು. 34
ಉಪನ್ಯಾಸ ಗ್ರಂಥಮಾಲೆಯಲ್ಲಿ ಪ್ರಕಟಿತವಾದ ಕಿರುಹೊತ್ತಗೆ. ಉ.ಕ. ಜಿಲ್ಲೆಯ ಸಮಗ್ರ ಯಕ್ಷಗಾನ ವಿವರಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುತ್ತದೆ. ಐದು ಅಧ್ಯಾಯದಲ್ಲಿ ಈ ವಿವರಗಳಿವೆ.

**ಉತ್ತುಂಗ**
ಅಂಬಾತನಯ ಮುದ್ರಾಡಿ
ಸಾಹಿತ್ಯ ಸಂಘ, ಮಣಿಪಾಲ
ಪ್ರ. 1989 ಪು. 39
ಹಿರಿಯ ತಾಳಮದ್ದಳೆ ಅರ್ಥಧಾರಿಯಾಗಿದ್ದ ಪೊಲ್ಯ ದೇಜಪ್ಪ ಶೆಟ್ಟಿಯವರ ಜೀವನ ಸಾಧನೆಗಳ ಪರಿಚಯಾತ್ಮಕವಾದ ಪುಸ್ತಕ.

**ಉದ್ದಾಮ**
ಸಂ. ಬರೆ ಕೇಶವ ಭಟ್ಟ
ಕೈರಂಗಳ ಗೋಪಾಲಕೃಷ್ಣ ಯಕ್ಷಗಾನ ಸಂಘ
ಪ್ರ. 1986





ಶೇಣಿಯವರ ಅಭಿನಂದನರೂಪದ ಕೃತಿ. ಲೇಖನಗಳ ಸಂಕಲನ, ಶೇಣಿಯವರ ಒಡನಾಡಿ ಸಹಕಲಾವಿದರ ಲೇಖನಗಳಿವೆ. (ಶೇಣಿಯವರ ಬಗೆಗೆ ಬಂದ ಮೊದಲನೆಯ ಅಭಿನಂದನ ಗ್ರಂಥವಿದು.)

**ಉಪ್ಪಿನಕುದ್ರು ಸೂತ್ರದ ಗೊಂಬೆಗಳ ಸೀಮೋಲ್ಲಂಘನ**
ಭಾಸ್ಕರ ಕೊಗ್ಗ ಕಾಮತ್, ಸಂಸ್ಕೃತಿ ಗುಲ್ವಾಡಿ
ಉಪ್ಪಿನಕುದ್ರು ದೇವಣ್ಣ ಪದ್ಮನಾಭ ಕಾಮತ್ ಮೆಮೋರಿಯಲ್ ಯಕ್ಷಗಾನ ಗೊಂಬೆಯಾಟ ಟ್ರಸ್ಟ್, ಉಪ್ಪಿನಕುದ್ರು
ಪ್ರ. 1996 ಪು. 72
ಯಕ್ಷಗಾನ ಗೊಂಬೆಯಾಟದ ತಂಡದ ವಿದೇಶ ಪ್ರವಾಸದ ಅನುಭವಕಥನ.

**ಒಡ್ಡೋಲಗ**
ಸಂ. ಭಾಸ್ಕರ ರೈ, ಕುಕ್ಕುವಳ್ಳಿ
ಬಂಟರ ಯಕ್ಷಗಾನ ಕಲೋತ್ಸವ ಸಮಿತಿ, ಮಂಗಳೂರು
ಪ್ರ. 2002 ಪು. 528
ಬಂಟರ ಯಕ್ಷಗಾನ ಕಲೋತ್ಸವದ ಸ್ಮರಣಸಂಪುಟ. ವಿವಿಧ ಲೇಖಕರ ಲೇಖನಗಳ ಸಂಕಲನ. ಮೊದಲ ಭಾಗ 'ಯಕ್ಷಪ್ರಸಂಗ'ದಲ್ಲಿ 58 ಲೇಖನಗಳಿವೆ. ಇವು ಸಮಗ್ರ ಯಕ್ಷಗಾನದ ವಿವಿಧ ವಿಷಯಗಳ ಬಗೆಗಿವೆ. ಎರಡನೆಯ ಭಾಗ 'ಯಕ್ಷಭಟರು'. ಇದರಲ್ಲಿ ಯಕ್ಷಗಾನಕ್ಷೇತ್ರದಲ್ಲಿ ಬಂಟಸಮಾಜದವರ ಸಾಧನೆ, ಕೊಡುಗೆ ಮತ್ತು ಕಲಾವಿದರ ಪರಿಚಯ ರೂಪದ 32 ಲೇಖನಗಳಿವೆ.

**ಕನ್ನಡದ ಅನರ್ಘ್ಯ ಛಂದೋರತ್ನಗಳು**
ಡಾ. ಯನ್. ನಾರಾಯಣ ಶೆಟ್ಟಿ
ಯಕ್ಷಕಲಾ ಪ್ರಧ್ಮಾಪನ ಪ್ರಕಾಶನ, ಕಿನ್ನಿಗೋಳಿ
ಪ್ರ. 2002 ಪು. 137
ಯಕ್ಷಗಾನದ ಹಲವು ಛಂದೋಬಂಧಗಳ ನಿರೂಪಣೆ ಇದರಲ್ಲಿದೆ. ಸಮಗ್ರ ಕನ್ನಡ ಛಂದೋವಿಚಾರಗಳಿಗೆ ಸಂಬಂಧಿಸಿದ ವಿಷಯಗಳಾದರೂ ಯಕ್ಷಗಾನದ ವಿಶಿಷ್ಟ ಛಂದೋಬಂಧಗಳ ಬಗೆಗೆ ಹೆಚ್ಚಿನ ವಿವರಗಳಿವೆ.

**ಕರಾವಳಿ ಯಕ್ಷಗಾನ**
ಸಂ. ಜಿ. ವಿ. ಆನಂದಮೂರ್ತಿ
ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು
ಪ್ರ. 2000 ಪು. 204
ಕರಾವಳಿ ಯಕ್ಷಗಾನದ ವಿವಿಧ ವಿಷಯಗಳ ಬಗೆಗೆ ಬರೆಯಲಾದ ಲೇಖನಗಳ ಸಂಕಲನ. 18 ಲೇಖನಗಳಿವೆ. 'ಜಾನಪದ ಸಮಾಚಾರ' ಪತ್ರಿಕೆಯ ವಿಶೇಷ ಸಂಚಿಕೆ. 2000 ಮಾರ್ಚ್ ತಿಂಗಳಲ್ಲಿ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಅಕಾಡೆಮಿಯು ಏರ್ಪಡಿಸಿದ ಯಕ್ಷಗಾನ ಸಮ್ಮೇಳನದ ನೆನಪಿನ ಸಂಚಿಕೆ.

ಯಕ್ಷಗಾನ ವಿಮರ್ಶೆಯ ಲೇಖನಗಳ ಸಂಕಲನ. ಏಳು ಲೇಖನಗಳಿವೆ. ವೇಷ ಮುಖವರ್ಣಿಕೆಗಳ ಹಲವು ಭಾವಚಿತ್ರಗಳು ಮತ್ತು ರೇಖಾಚಿತ್ರಗಳಿವೆ. ಕೆ. ಎಂ. ರಾಘವ ನಂಬಿಯಾರರ ಮುನ್ನುಡಿಯಿದೆ. ಮೊದಮೊದಲ ಯಕ್ಷಗಾನ ವಿಮರ್ಶಲೇಖನ ಸಂಕಲನಗಳಲ್ಲೊಂದು.

**ಗಡಿನಾಡಿನ ಕಿಡಿ**

ಪ್ರ. ಸಂ. ವೈ. ಎಸ್. ವಿ. ಭಟ್
ಲಲಿತಕಲಾ ಸದನ, ಕಾಸರಗೋಡು
ಪ್ರ. 1990 ಪು. 698

ಕಯ್ಯಾರ ಕಿಞ್ಞಣ್ಣ ರೈಗಳಿಗೆ ಸಮರ್ಪಿಸಿದ ಗ್ರಂಥ. ಕಾಸರಗೋಡಿನ ಕುರಿತಾದ ಆಕರ ಗ್ರಂಥ. ಇದರ ಸಂಪಾದನ, ಸಂಸ್ಮರಣ ಎಂಬ ಭಾಗಗಳಲ್ಲಿ ಯಕ್ಷಗಾನದ ಬಗೆಗಿನ 10ಕ್ಕೂ ಹೆಚ್ಚು ಲೇಖನಗಳಿವೆ.

**ಗಾನಕೋಗಿಲೆ**

ಸಂ. ಎಂ. ಪ್ರಭಾಕರ ಜೋಶಿ, ಎಸ್. ನಾರಾಯಣ ಭಟ್, ರಾಜಮಣಿ ರಾಮಕುಂಜ
ದಾಮೋದರ ಮಂಡೆಚ್ಚ ಸ್ಮರಣ ಸಮಿತಿ, ಜೋಡುಮಾರ್ಗ.
ಪ್ರ. 1990 ಪು. 166

ದಾಮೋದರ ಮಂಡೆಚ್ಚ ಸಂಸ್ಮರಣಗ್ರಂಥ. ಮೊದಲ ಭಾಗ 'ವ್ಯಕ್ತಿ'ಯಲ್ಲಿ 14 ಲೇಖನಗಳು ಮತ್ತು ಎರಡನೆಯ ಭಾಗ 'ಕಲೆ'ಯಲ್ಲಿ 12 ಲೇಖನಗಳಿವೆ. ಮೊದಲ ಭಾಗ ಪು. 59ರವರೆಗೆ, ಎರಡನೆಯ ಭಾಗ ಪು. 63ರಿಂದ 166.

**ಗುರುಭ್ಯೋ ನಮಃ**

ಸಂ. ಎಚ್. ಶ್ರೀಧರ ಹಂದೆ
ಯಕ್ಷಗಾನ ಕೇಂದ್ರ, ಎಂ. ಜಿ. ಎಂ. ಕಾಲೇಜು, ಉಡುಪಿ
ಪ್ರ. 2006 ಪು. 111

ಉಡುಪಿಯ ಯಕ್ಷಗಾನ ಕೇಂದ್ರದಲ್ಲಿ ಆಗಿ ಹೋದ ಮತ್ತು ಈಗ ಇರುವ ಗುರುವೃಂದದವರ ಬಗೆಗಿನ ಪರಿಚಯ ಲೇಖನಗಳ ಸಂಕಲನ. ಚಿತ್ರಗಳೂ ಇವೆ.

**ಗುರು ವೀರಭದ್ರ ನಾಯ್ಕರು**

ಎಚ್. ಸುಬ್ಬಣ್ಣ ಭಟ್ಟ
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಪ್ರ. 1996 ಪು. 22

ಬಡಗುತಿಟ್ಟಿನ ಅಗ್ರಮಾನ್ಯ ಕಲಾವಿದ ವೀರಭದ್ರ ನಾಯ್ಕರ ಜೀವನ ಸಾಧನೆಗಳ ಪರಿಚಯ ಪುಸ್ತಕ.

**ಘಟ್ಟದ ಕೋರೆ ಯಕ್ಷಗಾನ ಮತ್ತು ಕೋಳಗಾಲ**

ಜಯಚಂದ್ರ ರಾಜ ಅರಸ್





ಪ್ರಣವಶ್ರೀ ಪ್ರಕಾಶನ, ಬೆಂಗಳೂರು
ಪ್ರ. 1995 ಪು. 184

ಯಕ್ಷಗಾನದ ಒಂದು ಪ್ರಕಾರ ಘಟ್ಟದ ಕೋರೆ. ಅದರ ಪರಿಚಯ ಮತ್ತು ಆ ಕಲೆ ರೂಢವಾಗಿರುವ ಕೋಳಗಾಲ ಗ್ರಾಮದ ಅಧ್ಯಯನ ರೂಪದ ಗ್ರಂಥವದು.

**ಚಿತ್ರಗಳ ಮೂಲಕ ಸಮಕಾಲೀನ ಯಕ್ಷಗಾನ**

ಸಂ. ಮನೋಹರ ಯಸ್. ಕುಂದರ್
ಶೀನ ಮೀನ ಪ್ರಕಾಶನ, ಬಡಾಎರ್ಮಾಳು, ಉಡುಪಿ
ಪ್ರ. 1998 ಪು. 70

ತೆಂಕು ಮತ್ತು ಬಡಗುತಿಟ್ಟುಗಳ ಹೆಚ್ಚಿನ ವೇಷಗಳ ವರ್ಣಚಿತ್ರಗಳು ಮತ್ತು ವಿವರಣೆಗಳನ್ನುಳ್ಳ ಸಂಗ್ರಾಹ್ಯ ಕೃತಿ. ಮುನ್ನೂರಕ್ಕೂ ಹೆಚ್ಚು ಚಿತ್ರಗಳಿವೆ. ಕೊನೆಯ ಭಾಗದಲ್ಲಿ ದೀವಟಿಗೆ ಬೆಳಕಿನ ಆಟಗಳ ಚಿತ್ರಗಳೂ ಇವೆ. ಸಮಕಾಲೀನ ಯಕ್ಷಗಾನವನ್ನು ಚಿತ್ರಗಳ ಮೂಲಕ ದಾಖಲೆಗೊಳಿಸಲಾಗಿದೆ. ಮುಖವರ್ಣಿಕೆ, ವೇಷರಚನೆ, ಆಭರಣಗಳು, ಕಾಲಾಂತರದ ಬದಲಾವಣೆಗಳು-ಎಲ್ಲ ಅಧ್ಯಯನಗಳಿಗೂ ಆಕರಸಾಮಗ್ರಿ ಇಲ್ಲಿ ಒಟ್ಟು ಸೇರಿದೆ. ಡಾ. ರಾಘವ ನಂಬಿಯಾರರ ಮುನ್ನುಡಿ ಮತ್ತು ಸಂಪಾದಕರ ಅರಿಕೆಯಲ್ಲಿ ಅಧ್ಯಯನಕ್ಕೆ ಅನುಕೂಲವಾದ ವಿಷಯಗಳಿವೆ.

**ಚಿನ್ನದ ತಾಳ**

ಸಂ. ನಿರೂಪಣೆ : ಡಾ. ಕೆ. ಎಂ. ರಾಘವ ನಂಬಿಯಾರ್
ಭಾಗವತ ಗೋರ್ಪಾಡಿ ವಿಠ್ಠಲ ಪಾಟೀಲ್ ಅಭಿಮಾನಿ ಬಳಗ, ಬ್ರಹ್ಮಾವರ
ಪ್ರ. 2005 ಪು. 211

ಭಾಗವತ ಗೋರ್ಪಾಡಿ ವಿಠ್ಠಲ ಪಾಟೀಲರ ನೆನಪಿನ ಸಂಚಯ. ಭಾಗ ಎರಡರಲ್ಲಿ ರಂಗಮಾಹಿತಿ, ವಿವಿಧ ತುಂಡುಪದಗಳು, ಅವುಗಳ ತಾಳ ಪ್ರಸ್ತಾರ, ಭಾಗ ಮೂರರಲ್ಲಿ ವ್ಯಕ್ತಿ ವಿಶೇಷತೆ ಮತ್ತು ಪಾಟೀಲರು ರಚಿಸಿದ ಎರಡು ಪ್ರಸಂಗಗಳಿವೆ. ಅಪೂರ್ವ ಮಾಹಿತಿಗಳಿವೆ. ಯಕ್ಷಗಾನದ ಹಿಮ್ಮೇಳದಲ್ಲಿ ದುಡಿಯುವವರಿಗೂ ಅವಶ್ಯ ಕೈಪಿಡಿಯಂತೆ ಉಪಯೋಗವಾಗುವ ಹಾಗಿದೆ.

**ಚೆಂಡೆ ಮದ್ದಳೆಗಳ ನಡುವೆ**

ಬಿ. ಗೋಪಾಲಕೃಷ್ಣ ಕುರುಪ್
ಕನ್ನಡ ಸಂಘ, ಕಾಂತಾವರ, ಕಾರ್ಕಳ
ಪ್ರ. 2004 ಪು. 139

ಮದ್ದಳೆಗಾರ ಗೋಪಾಲಕೃಷ್ಣ ಕುರುಪ್ ಅವರ ಆತ್ಮಕಥನ. ಅವರ ಜೀವನದ ಏಳುಬೀಳುಗಳೊಂದಿಗೆ ಯಕ್ಷಗಾನದ ಬಗೆಗಿನ ಅನೇಕ ವಿವರಗಳು ನಿರೂಪಿತವಾಗಿವೆ. ಭಾವಚಿತ್ರಗಳಿವೆ.

**ಚೆಂಡೆಯ ಮೆಲುನುಡಿ**

ಅನುಭವ : ನೆಡ್ಲೆ ನರಸಿಂಹ ಭಟ್ಟ

ಪ್ರ. 1983 ಪು. 120

ಯಕ್ಷಗಾನದ ಬಗೆಗಿನ ಪಾರಂಪರಿಕ ವಿವರಗಳು, ತೆಂಕುತಿಟ್ಟಿನ ಪರಿಚಯ, ಇಂದಿನ ಯಕ್ಷಗಾನದ ಸ್ಥಿತಿ, ಲೇಖಕರ ಕಲೋಪಾಸನೆಯ ವಿವರಗಳು, ಪಾರ್ತಿಸುಬ್ಬನ ಬಗೆಗಿನ ಮಾಹಿತಿ ಇತ್ಯಾದಿ ಮಿಶ್ರವಿಷಯಗಳುಳ್ಳ ಪುಸ್ತಕ.

ದಶಾವತಾರದ ಮಾತು

ಕೆ. ಎಚ್. ಸೂರ್ಯನಾರಾಯಣ ಹಂದೆ

ಹಂದೆ ಪ್ರಕಾಶನ, ಕೋಟ

ಪ್ರ. 1982 ಪು. 94

ಹಾರಾಡಿ ರಾಮ ಗಾಣಿಗರ ಪರಿಚಯ, ಅವರು ಮಾಡುತ್ತಿದ್ದ ಭೂಮಿಕೆಗಳಲ್ಲಿ ಕರ್ಣಾವಸಾನದ ಕರ್ಣ, ಉತ್ತರ ಗೋಗ್ರಹಣದ ಉತ್ತರ, ಭೀಷ್ಮ ವಿಜಯದ ಭೀಷ್ಮ, ವಿರಾಟಪರ್ವದ ಕೀಚಕ, ರತಿ ಕಲ್ಯಾಣದ ಕಮಲ ಭೂಪ, ಜಾಂಬವತಿ ಕಲ್ಯಾಣದ ಜಾಂಬವತಿ– ಈ ವೇಷಗಳ ಮಾತುಗಳನ್ನು ತಮ್ಮದೇ ಶೈಲಿಯಲ್ಲಿ ಲೇಖಕರು ಸಂಗ್ರಹಿಸಿ ಬರೆದಿದ್ದಾರೆ. (ಧ್ವನಿ ಮುದ್ರಣ ದಾಖಲೆಯಲ್ಲ.)

ದೀವಟಿಗೆ

ಕೆ. ಎಂ. ರಾಘವ ನಂಬಿಯರ್

ಅತ್ರಿ ಬುಕ್ ಸೆಂಟರ್, ಮಂಗಳೂರು

ಪ್ರ. 2003 ಪು. 86.

ದೀವಟಿಗೆ ಬೆಳಕಿನ ಆಟಗಳಿಲ್ಲವಾದ ಹೊಸಕಾಲದಲ್ಲಿ ಪುನಃ ಹಿಂದಿನಕಾಲದ ಆಟಗಳ ಪುನಃಸಂಘಟನೆಯ ಕಥನ. ಯಕ್ಷಕೌಮುದಿ ಸಂಘಟನೆ ಮತ್ತು ಅದರ ಮೂಲಕ ನಡೆಸಿದ ಪ್ರಯೋಗಗಳ ಬಗೆಗೆ ಅನುಭವ ಕಥನ ಮತ್ತು ಚಿಂತನ. ಕಾರ್ಯಕ್ರಮದ ಭಾವಚಿತ್ರಗಳ ಸಹಿತವಾಗಿದೆ.

ದೇವರಂಗ

ಸಂ. ಪ್ರೊ. ಮಹೇಶ ಅಡಕೋಳಿ

ಶ್ರೀದೇವರು ಹಗಡೆ ಸ್ಮಾರಕ ಪ್ರತಿಷ್ಠಾನ, ಮೂರೂರು, ಉ. ಕ.

ಪ್ರ. 1992

ಯಕ್ಷಗಾನದ ಹಿರಿಯ ಕಲಾವಿದ ಮೂರೂರು ದೇವರು ಹೆಗಡೆಯವರ ಸಂಸ್ಮರಣ ಗ್ರಂಥ. ದಿವಂಗತರ ಜೀವನ ಸಾಧನೆಗಳ ದಾಖಲೆ ಇದರಲ್ಲಿದೆ.

ಧರ್ಮಸ್ಥಳ ಮೇಳ

ಬಾ. ಸಾಮಗ, ಮಲ್ಪೆ

ತುಳುನಾಡ್ ಪ್ರಗತಿ ಪ್ರಕಾಶನಾಲಯ, ಮಲ್ಪೆ

ಪ್ರ. 1980 ಪು. 12

12 ಪುಟಗಳ ಪರಿಚಯ ಲೇಖನ, ಹಲವು ಚಿತ್ರಗಳುಳ್ಳ ಕಿರುಹೊತ್ತಗೆ.





ನಮ್ಮೂರ ಯಕ್ಷರು

ಸಂ. ಕೆ. ಎಸ್. ಉಪಾಧ್ಯಾಯ

ಸಿದ್ಧಾರ್ಥ ಪ್ರಕಾಶನ, ಮಂಗಳೂರು

ಪ್ರ. 1987 ಪು. 117

ಮೊದಲ ಭಾಗದಲ್ಲಿ ವೀರಭದ್ರ ನಾಯಕರು ಬರೆದ ಇತರ ಕಲಾವಿದರ ಪರಿಚಯ, ಆತ್ಮವೃತ್ತ ನಿರೂಪಣೆ, ಎರಡನೆಯ ಭಾಗದಲ್ಲಿ ಕೆ. ಎಸ್. ಉಪಾಧ್ಯಾಯರು ಬರೆದ ಕಲಾವಿದರ ಪರಿಚಯ ಲೇಖನಗಳು, ಅನುಬಂಧದಲ್ಲಿ ಡಾ. ವಿ. ರಾಘವನ್ ಅವರ ಇಂಗ್ಲಿಷ್ ಲೇಖನದ ಅನುವಾದ– ಭಾವಚಿತ್ರಗಳು ಇದರಲ್ಲಿವೆ.

ನಿನ್ನೆಯ ಮನ್ನೆಯರು

ಕೋಟ ಶ್ರೀನಿವಾಸ ನಾಯಕ

ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ

ಪ್ರ. 1985 ಪು. 91

ಹಿರಿಯ ತಲೆಮಾರಿನ ಭಾಗವತರೊಬ್ಬರು ಬರೆದ ಇತರ ಕಲಾವಿದರ ಪರಿಚಯ ಲೇಖನಗಳ ಸಂಕಲನ. ಬಡಗುತಿಟ್ಟಿನ 15 ಕಲಾವಿದರ ಬಗೆಗೆ ಲೇಖನಗಳಿವೆ. ಹೆಚ್ಚಿನವರು 20ನೆಯ ಶತಮಾನದ ಪೂರ್ವಾರ್ಧದಲ್ಲಿ ಕಲಾವ್ಯವಸಾಯ ಮಾಡಿದವರು.

ನಿಮ್ಮ ಚಿಟ್ಟಾಣಿ

ಅನುಭವ : ಚಿಟ್ಟಾಣಿ ರಾಮಚಂದ್ರ ಹೆಗಡೆ

ನಿರೂಪಣೆ : ಡಾ. ಜಿ. ಎಲ್. ಹೆಗಡೆ

ಯಲ್ಲಾಪುರ ಪ್ರಕಾಶನ, ಹಲಸಖಂಡ, ಶಿವಮೊಗ್ಗ

ಪ್ರ. 2004 ಪು. 140

ಬಡಗುತಿಟ್ಟಿನ ಅಗ್ರಮಾನ್ಯಕಲಾವಿದರೆಂದು ಹೆಸರುಪಡೆದ ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಆತ್ಮಕಥನ ರೂಪದ ಅನುಭವನಿರೂಪಣೆ. 16 ಅಧ್ಯಾಯಗಳಲ್ಲಿ ನಿರೂಪಿತ. ಚಿಟ್ಟಾಣಿಯವರ ಭೀಮರಥಶಾಂತಿಯ ಸಮಯಕ್ಕೆ ಪ್ರಕಟಿತ.

ನೂತನ ಯಕ್ಷಗಾನ ಸಭಾಲಕ್ಷಣ ಮತ್ತು ಪ್ರಸಂಗಪೀಠಿಕೆ

ಯಂ. ಡಿ. ಪಾಲ್‌ಜಾಧವ್, ಮುಂಡೋಡು

ಶ್ರೀ ಮೂಕಾಂಬಿಕಾ ಪ್ರಕಾಶನ, ಮುಂಡೋಡು, ಉಳ್ಳೋಡಿ

ಪ್ರ. 1989 ಪು. 90

ಯಕ್ಷಗಾನದ ಪೂರ್ವರಂಗದ ಅಭ್ಯಾಸಕ್ಕಾಗಿ ಸಿದ್ಧಪಡಿಸಿದ ಪಠ್ಯಪುಸ್ತಕ. ತೆಂಕುತಿಟ್ಟಿನ ಬಾಯಿತಾಳಗಳನ್ನು ನಿರೂಪಿಸಿದೆ. ಸಭಾಲಕ್ಷಣವನ್ನು ತಿದ್ದುಪಡಿಮಾಡಿಕೊಂಡು ರಚಿಸಿದ ಕೃತಿ.

ನೆನಪಿನ ರಂಗಸ್ಥಳ

ಅನುಭವ: ಕೆರೆಮನೆ ಶಿವರಾಮ ಹೆಗಡೆ

ನಿರೂಪಣೆ: ಡಾ. ಜಿ. ಎಸ್. ಭಟ್

ಕರ್ನಾಟಕ ಸಂಘ, ಪುತ್ತೂರು
ಪ್ರ. 2002 ಪು. 82

ತೆಂಕುತಿಟ್ಟಿನ ಹಿರಿಯ ಕಲಾವಿದ ದಿ. ಕುರಿಯ ವಿಠಲ ಶಾಸ್ತ್ರಿಗಳ ಆತ್ಮಕಥೆ. 1967ರಲ್ಲಿ ಸುಧಾ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿತ. ನಿರೂಪಕರು ಪತ್ರಕರ್ತರಾಗಿದ್ದವರು. ಸಂಕ್ಷಿಪ್ತ, ಆದರೂ ಕಲಾವಿದರ ಸಾಹಸಜೀವನದ ಚಿತ್ರಣವಿದೆ. (ಲೇಖನರೂಪದಲ್ಲಿ ಪ್ರಕಟಗೊಂಡ ಯಕ್ಷಗಾನ ಕಲಾವಿದರೊಬ್ಬರ ಮೊತ್ತಮೊದಲ ಆತ್ಮವೃತ್ತ).

**ಬಣ್ಣದ ವೇಷ**

ಮುಳಿಯ ಮಹಾಬಲ ಭಟ್ಟ
ಕನ್ನಡಸಂಘ, ಮಂಗಳೂರು
ಪ್ರ. 1985 ಪು. 31

ಬಣ್ಣದ ವೇಷದ ಬಗೆಗಿನ ವಿಸ್ತೃತ ವಿವೇಚನೆಯುಳ್ಳ ಕಿರುಹೊತ್ತಗೆ. 'ತೆಕ್ಕುಂಜ ನೆನಪು' ಮಾಲಿಕೆಯಲ್ಲಿ 10ನೆಯ ಪ್ರಕಟನೆ.

**ಬಣ್ಣದ ವೇಷ ಮತ್ತು ಇತರ ಉಪನ್ಯಾಸಗಳು**

ಮುಳಿಯ ಮಹಾಬಲ ಭಟ್ಟ
ಲೇಖಕರೇ ಪ್ರಕಾಶಕರು
ಪ್ರ. 1988 ಪು. 82

ವಿವಿಧ ಸಂದರ್ಭಗಳಲ್ಲಿ ಬರೆದ ಯಕ್ಷಗಾನ ವಿಮರ್ಶೆ ವಿವೇಚನೆಗಳಿಗೆ ಸಂಬಂಧಿಸಿದ ಲೇಖನಗಳ ಸಂಕಲನ. ಒಟ್ಟು ಎಂಟು ಲೇಖನಗಳಿವೆ. (ಇವುಗಳಲ್ಲಿ ಬಣ್ಣದ ವೇಷ ಎಂಬುದು ಕಿರುಹೊತ್ತಗೆಯಾಗಿ ಪ್ರಕಟಗೊಂಡಿತ್ತು.)

**ಬಯಲಾಟ ನೋಡೋಣ ಬಾ**

ಎ. ಸದಾನಂದ ಹೆಬ್ಬಾರ
(ಲೇಖಕರೇ ಪ್ರಕಾಶಕರು)
ಪ್ರ. ? ಪು. 41

ಸಂಭಾಷಣೆಯ ರೂಪದಲ್ಲಿ ಯಕ್ಷಗಾನದ ಪ್ರಾಥಮಿಕ ಪರಿಚಯ ನೀಡುವ ಕೃತಿ. ಚಿತ್ರಗಳೂ ಇವೆ.

**ಬೌದ್ಧಮತದಲ್ಲಿ ಯಕ್ಷಕಲೆ**

ಕ. ವೆಂ. ರಾಜಗೋಪಾಲ
ಕೊಂಡಜ್ಜಿ ಪ್ರಕಾಶನ, ಬೆಂಗಳೂರು – 16
ಪ್ರ. 1997 ಪು. 180

ಬೌದ್ಧ ಧರ್ಮದ ಯಕ್ಷಕಲ್ಪನೆಯ ಬಗೆಗೆ ದೀರ್ಘ ವಿವೇಚನೆಯ ಹಿನ್ನೆಲೆಯಲ್ಲಿ ಯಕ್ಷಗಾನ ಕಲೆಯ ಮೂಲವನ್ನು ಬೌದ್ಧಧರ್ಮದಲ್ಲಿ ಹುಡುಕುವ ಯತ್ನ ಇದರಲ್ಲಿದೆ. ಯಕ್ಷಗಾನದ ಪೂರ್ವಕಲ್ಪನೆಯು ಬೌದ್ಧಮತೀಯವೆಂದೂ ಭಾಗವತನು ಮಹಾಯಾನ ಪಂಥದ ಸಂಘಾಧ್ಯಕ್ಷನೆಂದೂ ಗಣಪತಿಯು ಯಕ್ಷನೆಂದೂ ಪ್ರತಿಪಾದಿಸಲಾಗಿದೆ.





**ಭಾಗವತ ನಾರಣಪ್ಪ ಉಪ್ಪೂರ**

ಪ್ರೊ. ಶ್ರೀಧರ ಉಪ್ಪೂರ
ದಿಗಂತ ಸಾಹಿತ್ಯ, ಮಂಗಳೂರು
ಪ್ರ. 1998 ಪ್ರ. 44

ಬಡಗುತಿಟ್ಟಿನ ಖ್ಯಾತ ಭಾಗವತರಾದ ನಾರಣಪ್ಪ ಉಪ್ಪೂರರು ತಮ್ಮ ಜೀವನದ ಬಗೆಗೆ ಮತ್ತು ಸಮಕಾಲೀನ ಬಗೆಗೆ ಬರೆದ ಕಿರು ಬರಹಗಳು ಮತ್ತು ಅವರ ಬಗೆಗೆ ಶ್ರೀಧರ ಉಪ್ಪೂರರು ಬರೆದ ಬರಹಗಳು ಸೇರಿದ ಪುಸ್ತಕ ಪರಿಚಯಾತ್ಮಕ ಕೃತಿ.

**ಮದ್ದಳೆಯ ಮಾಯಾಲೋಕ**

ನೆನಪುಗಳು : ಹಿರಿಯಡಕ ಗೋಪಾಲರಾವ್
ನಿರೂಪಣೆ : ಕೆ. ಎಂ. ರಾಘವ ನಂಬಿಯಾರ್
ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ
ಪ್ರ. 1997 ಪು. 204

ಬಡಗುತಿಟ್ಟಿನ ಹಿರಿಯ ಮದ್ದಳೆಗಾರ ಹಿರಿಯಡಕ ಗೋಪಾಲರಾಯರ ಜೀವನದ ಕಥನ. ಆತ್ಮಕಥೆಯ ರೂಪದಲ್ಲಿದೆ. 20ನೆಯ ಶತಮಾನದ ಯಕ್ಷಗಾನದ ಸ್ಥಿತಿಗತಿಗಳ ಬಗೆಗೆ ಅನೇಕ ಮಾಹಿತಿಗಳಿವೆ. 99 ಪುಟ್ಟ ಘಟಕಗಳಲ್ಲಿ ನೆನಪುಗಳ ನಿರೂಪಣೆ, ಅನುಬಂಧದಲ್ಲಿ ಬದುಕಿನ ಮಜಲುಗಳು, ಪ್ರಶಸ್ತಿ ವಿವರ ಇತ್ಯಾದಿಗಳಿವೆ. ಪ್ರೊ. ಲೀಲಾ ಭಟ್ ಅವರ ವಿಸ್ತೃತ ಮುನ್ನುಡಿಯಿದೆ.

**ಮಣಿಹಾರ**

ಸಂ. ಎಸ್. ಎನ್. ಪಂಜಾಜೆ
ಕರ್ನಾಟಕ ಸಾಂಸ್ಕೃತಿಕ ವೇದಿಕೆ, ಬೆಂಗಳೂರು
ಪ್ರ. 2004, ಪು. 136

ಯಕ್ಷಗಾನ ಮತ್ತು ಸಮಾನಾಂತರ ಕಲೆಗಳ ಬಗೆಗೆ ಬರೆಯಲಾದ ಲೇಖನಗಳ ಸಂಕಲನ. ವಿವಿಧ ಲೇಖಕರ 17 ಲೇಖನಗಳಿವೆ.

**ಮಧುಪುರ**

ಸಂ. ಕೆ. ವೆಂಕಟಕೃಷ್ಣಯ್ಯ
ಗೀತಾ ಪ್ರಕಾಶನ, ಕಾಸರಗೋಡು
ಪ್ರ. 1962 ಪು. 235

ಮಧೂರು ಮೂಡಪ್ಪಸೇವೆ – ನೆನಪಿನ ಸಂಪುಟ. ಹಲವಾರು ಯಕ್ಷಗಾನಕವಿ–ಕಲಾವಿದರ ಪರಿಚಯ ಲೇಖನಗಳಿವೆ. ತೆಂಕುತಿಟ್ಟು ಯಕ್ಷಗಾನ, ಸುಬ್ಬನ ಸಮಸ್ಯೆ ಇತ್ಯಾದಿ ವಿಸ್ತೃತ ಲೇಖನಗಳಿವೆ.

ಸಮಗ್ರ ಯಕ್ಷಗಾನದ ಬಗೆಗೆ ಕಾರಂತರ ವಿಚಾರಗಳನ್ನುಳ್ಳ ಗ್ರಂಥ. 10 ಅಧ್ಯಾಯಗಳಲ್ಲಿ ಯಕ್ಷಗಾನದ ಪ್ರಾಚೀನತೆ, ಇತಿಹಾಸ, ಸ್ಥಿತಿ-ಗತಿಗಳನ್ನೂ, ಇತರ ಪ್ರಕಾರಗಳನ್ನೂ ಹೇಳಲಾಗಿದೆ. 4 ಅನುಬಂಧಗಳಿವೆ. ವಿವಿಧ ವರ್ಣಚಿತ್ರಗಳಿವೆ. (ಕೃತಿಯು ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಿಗೂ ಅನುವಾದಿತವಾಗಿದೆ.)

**ಯಕ್ಷಗಾನ**

ಸಂ. ವಿ. ಸೀತಾರಾಮಯ್ಯ
ಐ. ಬಿ. ಎಚ್. ಪ್ರಕಾಶನ, ಬೆಂಗಳೂರು
ಪ್ರ. 1975

ಯಕ್ಷಗಾನದ ಬಗೆಗೆ ಬೇರೆ ಬೇರೆ ಲೇಖಕರು ಬರೆದ ಸಮೀಕ್ಷಾತ್ಮಕವಾದ ಮೂರು ವಿಸ್ತೃತ ಪ್ರಬಂಧಗಳು ಮತ್ತು ವಿ. ಸೀತಾಮಯ್ಯನವರ ವಿಸ್ತೃತ ಸಮೀಕ್ಷೆ ಸೇರಿದ ಪುಸ್ತಕವಿದು. 'ಯಕ್ಷಗಾನ ಕವಿಕೃತಿ'ಗಳ ಬಗೆಗೆ ನಿರ್ಮಲಾ ಇನಾಂದಾರ್, 'ಕಲೆ-ಪ್ರಯೋಗ' ಕುರಿತು ಪಿ. ವಿ. ಹಾಸ್ಯಗಾರ; 'ಯಕ್ಷಗಾನ ನಾಟಕ ಮಾಧ್ಯಮ' ಬಗೆಗೆ ಶಿವರಾಮ ಕಾರಂತರ ಲೇಖನಗಳಿವೆ.

**ಯಕ್ಷಗಾನ**

ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಪ್ರ. 1985 ಪು. 152

ಯಕ್ಷಗಾನದ ಬಗೆಗೆ ಎಂಟು ಮಂದಿಯ ಎಂಟು ಲೇಖನಗಳ ಸಂಕಲನ. ಯಕ್ಷಗಾನದ ಉಗಮ ಮತ್ತು ಅದರ ವಿವಿಧ ಅಂಗಗಳ ಬಗೆಗೆ ಪರಿಚಯಾತ್ಮಕ ಹಾಗೂ ಸಂಶೋಧನಾತ್ಮಕ ಲೇಖನಗಳಿವೆ.

**ಯಕ್ಷಗಾನ**

ವಿ. ಜೆ. ನಾಯಕ
ಶ್ರೀ ರಾಘವೇಂದ್ರ ಪ್ರಕಾಶನ, ಅಂಬಾರಕೊಡ್ಲ, ಅಂಕೋಲಾ
ಪ್ರ. 1996 ಪು. 110

ಯಕ್ಷಗಾನದ ಬಗೆಗೆ ವಿವಿಧ ಸಂದರ್ಭಗಳಲ್ಲಿ ಬರೆದ 10 ಲೇಖನಗಳ ಸಂಕಲನ. ಉ. ಕ. ಜಿಲ್ಲೆಯ ಮೇಳಗಳು ಕವಿಕಾವ್ಯಪರಿಚಯ ಇತ್ಯಾದಿಗಳ ಬಗೆಗಿನ ಲೇಖನವಿದೆ. ಗೌರೀಶ ಕಾಯ್ಕಿಣಿಯವರ ಮುನ್ನುಡಿಯಿದೆ.

**ಯಕ್ಷಗಾನ**

ಡಾ. ಚಕ್ಕೆರೆ ಶಿವಶಂಕರ್
ಶೃಂಗಾರ ಪ್ರಕಾಶನ, ಚಿಕ್ಕನಾಯಕನ ಹಳ್ಳಿ
ಪ್ರ. 1996 ಪು. 20

ಯಕ್ಷಗಾನದ ಪರಿಚಯವನ್ನು ಮಕ್ಕಳಿಗೆ ಮಾಡಿಕೊಡಲು ಬರೆಯಲಾದ ಕಿರು ಹೊತ್ತಗೆ. 'ಕಿಶೋರ ಸಾಹಿತ್ಯಮಾಲೆ'ಯಲ್ಲಿ ಪ್ರಕಟಿತ. ಒಂದೆರಡು ಪುಟಗಳ ವ್ಯಾಪ್ತಿಯ ಹನ್ನೊಂದು ಅಧ್ಯಾಯಗಳಿವೆ.





**ಯಕ್ಷಗಾನ ಅಧ್ಯಯನ**

ಭಾಗವತ ಎಂ. ನಾರ್ಣಪ್ಪ ಉಪ್ಪೂರ
ಹಂಗಾರಕಟ್ಟೆ ಯಕ್ಷಗಾನ ಕಲಾಕೇಂದ್ರ, ಕೋಟ
ಪ್ರ. 1978 ಪು. 190

ಯಕ್ಷಗಾನದ ಹಿಮ್ಮೇಳದ ಪಠ್ಯರೂಪ, ಯಕ್ಷಗಾನ ತಾಳಗಳು, ಗಣಪತಿಪೂಜೆ, ರಂಗಸ್ಥಳದ ಪೂರ್ವರಂಗ ಪದ್ಯಗಳು, ಸ್ತ್ರೀವೇಷ ಕುಣಿತ, ಪೀಠಿಕೆ, ವಿವಿಧ ವೇಷಗಳ ಒಡ್ಡೋಲಗಗಳು ಇತ್ಯಾದಿ ವಿವರಗಳಿವೆ.

**ಯಕ್ಷಗಾನ ಆಹಾರ್ಯಕಮ್ಮಟ**

ವಿಶ್ವನಾಥ ಶೇಟ್, ಹಾರ್ಸಿಕಟ್ಟಾ
ಗ್ರಾಮ ವಾಙ್ಮಯೀ, ಹೆಗ್ಗರಣಿ, ಉ. ಕ.
ಪ್ರ. 2001 ಪು. 139

ಯಕ್ಷಗಾನದ ವೇಷಭೂಷಣಗಳನ್ನು ತಯಾರಿಸುವ ವಿಧಾನವನ್ನು ಆ ಕೆಲಸ ಮಾಡುತ್ತಿರುವ ಲೇಖಕರು ವಿವರವಾಗಿ ಕೊಟ್ಟಿದ್ದಾರೆ. ಪ್ರಸ್ತಾವನೆ ಮತ್ತು ಮುಖವರ್ಣಿಕೆಗಳ ಬಗೆಗೆ ಬರೆದು 16 ಆಭೂಷಣಗಳ ಬಗೆಗೂ ಸ್ತ್ರೀವೇಷದ 20 ಆಭೂಷಣಗಳ ಬಗೆಗೂ ವಿವರಿಸಲಾಗಿದೆ. ಯಕ್ಷಗಾನದ ವಿವಿಧ ಆಹಾರ್ಯದ 46 ರೇಖಾಚಿತ್ರಗಳಿವೆ. ಈ ರೀತಿಯ ಮೊದಲ ಪುಸ್ತಕವಿದು.

**ಯಕ್ಷಗಾನ ಕಲಾತಪಸ್ವಿ**

ಸಂ. ವಿದ್ವಾನ್ ಕಯ್ಯಾರ ಕಿಞ್ಞಣ್ಣ ರೈ
ಯು. ಎಲ್. ರಾವ್, ಉಡುಪಿ (ಪ್ರಕಾಶಕ)
ಪ್ರ. 1968 ಪು. 224

ಹಿರಿಯ ಬಲಿಪ ಭಾಗವತರ ಸಂಸ್ಮರಣ ಗ್ರಂಥ. ಭಾಗ ಒಂದರಲ್ಲಿ ಜೀವನ, ಎರಡರಲ್ಲಿ ಸ್ಮರಣೆಗಳು, ಮೂರರಲ್ಲಿ ಯಕ್ಷಗಾನದ ಬಗೆಗೆ ಲೇಖನಗಳು, ಪರಿಶಿಷ್ಟದಲ್ಲಿ ಪರಿಚಯ, ಮಾನಪತ್ರಗಳ ಪ್ರತಿಗಳು ಇವೆ. ಎರಡನೆಯ ಭಾಗದಲ್ಲಿ 22 ಲೇಖನಗಳು, ಮೂರನೆಯ ಭಾಗದಲ್ಲಿ 10 ಲೇಖನಗಳಿವೆ. ಕೆಲವು ಭಾವಚಿತ್ರಗಳಿವೆ. ಯಕ್ಷಗಾನ ಕಲಾವಿದರ ಬಗೆಗೆ ಬಂದ ಸಂಸ್ಮರಣ ಗ್ರಂಥಗಳಲ್ಲಿ ಪ್ರಾಯಶಃ ಮೊತ್ತಮೊದಲನೆಯದು.

**ಯಕ್ಷಗಾನ ಕಲಾದರ್ಶನ**

ಪ್ರೊ. ಟಿ. ಕೇಶವ ಭಟ್ಟ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಪ್ರ. 2002 ಪು. 121

ಬೇರೆ ಬೇರೆ ಸಮಯದಲ್ಲಿ ಬರೆದ ಯಕ್ಷಗಾನ ವಿವಿದ ವಿಷಯಗಳ ಕುರಿತಾದ ಹನ್ನೆರಡು ಲೇಖನಗಳ ಸಂಕಲನ. ಕೊನೆಯಲ್ಲಿ 'ಯುಗಾದಿ ವೈಭವ' ಎಂಬ ಚಿಕ್ಕ ಪ್ರಸಂಗವಿದೆ. ಯಕ್ಷಗಾನದ ಬಗೆಗೆ ಬಂದ 30 ಪುಸ್ತಕಗಳ ಪಟ್ಟಿಯಿದೆ.

ಹಲವು ಛಂದೋಬಂಧಗಳನ್ನು ರಚಿಸಿ ಲಕ್ಷಣ ನೀಡಲಾಗಿದೆ. ಛಂದಸ್ಸಿನ ಅಧ್ಯಯನ ರೂಪದ ಗ್ರಂಥಗಳು ಬೇರೆ ಬಂದಿದ್ದರೂ ಈ ರೀತಿ ಸೂತ್ರರೂಪದಲ್ಲಿ ನಿರೂಪಿಸುವ ಗ್ರಂಥಗಳಲ್ಲಿ ಇದೇ ಮೊದಲನೆಯದು. ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಡಿ. ಲಿಟ್ ಪದವಿ ದೊರಕಿದ ಗ್ರಂಥ.

**ಯಕ್ಷಗಾನ ಛಂದೋವಿವೇಕ**
ಕ. ಪು. ಸೀತಾರಾಮ ಕೆದಿಲ್ಲಾಯ
ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು
ಪ್ರ. 1987 ಪು. 80
ವೃತ್ತಗಳು, ಷಟ್ಪದಿಗಳು, ಮಾತ್ರಾಗಣದ ಬಂಧಗಳು ಮತ್ತು ತ್ರಿಮೂರ್ತಿ ಗಣ(ಅಂಶಗಣ)ದ ವಿವಿಧ ಬಂಧಗಳನ್ನು ಗಣವಿಂಗಡಣೆಮಾಡಿ ನಿರೂಪಿಸಿದೆ. ತಾಳದ ಪದ್ಯಗಳಿಗೆ ರಾಗತಾಳಗಳ ಹೆಸರುಗಳನ್ನು ಛಂದಸ್ಸಿನ ಹೆಸರಾಗಿ ನೀಡಿದೆ. ಅತೀತಾಕ್ಷರ, ವರಣ, ಅನುಪದ, ಶಿಖಾಪದ, ಮೊದಲಾದ ವಿಶಿಷ್ಟ ಸಂಜ್ಞೆಗಳ ವಿವರ ಮೊದಲಿಗಿದೆ.

**ಯಕ್ಷಗಾನ ತಾಳಮದ್ದಳೆ**
ಬಾ. ಸಾಮಗ, ಮಲ್ಪೆ
ತುಳುನಾಡ್ ಪ್ರಗತಿ ಪ್ರಕಾಶನಾಲಯ, ಮಲ್ಪೆ
ಪ್ರ. 1980 ಪು. 14
ತಾಳಮದ್ದಳೆಯ ಪರಿಚಯದ ಕಿರುಹೊತ್ತಗೆ.

**ಯಕ್ಷಗಾನ ತಾಳಮದ್ದಳೆ – ನವ್ಯೋತ್ತರ ಸಂಕಥನ**
ಮಾಧವ ಪೆರಾಜೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಪ್ರ. 2000 ಪು. 314
ಆಧುನಿಕ ಸಂಕಥನವಾದಿ ಸಿದ್ಧಾಂತಗಳ ಹಿನ್ನೆಲೆಯಿಂದ ಯಕ್ಷಗಾನ ತಾಳಮದ್ದಳೆಯನ್ನು ಈ ಗ್ರಂಥದಲ್ಲಿ ಪರಿಶೀಲಿಸಲಾಗಿದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿ.ಎಚ್.ಡಿ. ನಿಬಂಧವಿದು. ಹನ್ನೆರಡು ಅಧ್ಯಾಯಗಳಲ್ಲಿ ವಿಷಯ ವಿವೇಚನೆ, ಟಿಪ್ಪಣಿಗಳು, ಅನುಬಂಧಗಳು, ಗ್ರಂಥಸೂಚಿ ಇವೆ. ಎರಡನೆಯ ಅಧ್ಯಾಯದಲ್ಲಿ ತಾಳಮದ್ದಳೆಯ ಬಗೆಗೆ ಅದುವರೆಗೆ ಬಂದ ಅಧ್ಯಯನದ ವಿವರಗಳಿವೆ. ನವ್ಯೋತ್ತರ ಎಂಬುದನ್ನು post modern ಎಂಬ ಕಲ್ಪನೆಗೆ ಸಂವಾದಿಯಾಗಿ ಇಲ್ಲಿ ಬಳಸಿದೆ.

**ಯಕ್ಷಗಾನ ತೆಂಕುತಿಟ್ಟಿನ ಚೆಂಡೆವಾದನ ಕ್ರಮ**
ಬಿ. ಗೋಪಾಲಕೃಷ್ಣ ಕುರುಪ್
ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ
ಪ್ರ. 1998 ಪು. 98
ತೆಂಕುತಿಟ್ಟಿನ ಚೆಂಡೆವಾದನದ ಪಠ್ಯಪುಸ್ತಕ.





**ಯಕ್ಷಗಾನ ತೆಂಕುತಿಟ್ಟಿನ ಮದ್ದಳೆವಾದನ ಕ್ರಮ**
ರಚನೆ – ಬಿ. ಗೋಪಾಲಕೃಷ್ಣ ಕುರುಪ್
ಸಂಪಾದನೆ – ಕೆ. ಎಂ. ರಾಘವ ನಂಬಿಯಾರ್
ಯುವಕಮಂಡಲ, ಸಾಣೂರು.
ಪ್ರ. 1995 ಪು. 78
ಮದ್ದಳೆವಾದನದ ಪಠ್ಯಪುಸ್ತಕ. ಪ್ರಾಥಮಿಕ ನಾದಗಳ ಪಾಠದಿಂದ ತೊಡಗಿ ವಿವಿಧ ತಾಳಗಳು, ಮುಕ್ತಾಯಗಳು ಇವುಗಳ ನುಡಿತಗಳು ಮತ್ತು ಅವುಗಳ ಲೆಕ್ಕಾಚಾರಗಳನ್ನು ಕೊಟ್ಟಿದೆ.

**ಯಕ್ಷಗಾನ ತ್ರೈಲೋಕ್ಯದರ್ಶನ**
ಸಂ. ಹಂದಾಡಿ ಮಧುಸೂಧನ ಭಟ್ಟ
ಯಕ್ಷಗಾನ ಪ್ರಕಾಶನ, ಉಡುಪಿ
ಪ್ರ. 1973 ಪು. 26
ಯಕ್ಷಗಾನದ ವಿವಿಧ ವಿಷಯಗಳ ಬಗೆಗೆ 8 ಸಣ್ಣ ಲೇಖನಗಳ ಸಂಕಲನ.

**ಯಕ್ಷಗಾನದಲ್ಲಿ ಅರ್ಥಗಾರಿಕೆ**
ಪೆರ್ಲ ಕೃಷ್ಣ ಭಟ್ಟ
ಲೇಖಕರೇ ಪ್ರಕಾಶಕರು
ಪ್ರ. 1990 ಪು. 112
ಅರ್ಥಗಾರಿಕೆಯ ಸ್ವರೂಪ ಮತ್ತು ವಿಧಾನದ ಬಗೆಗೆ ಮಾರ್ಗದರ್ಶನ ನೀಡುವ ಪುಸ್ತಕ. ಅರ್ಥಗಾರಿಕೆಯ ಅಷ್ಟಾಂಗಗಳು, ಅರ್ಥಗಾರಿಕೆಯಲ್ಲಿ ಉಪಯೋಗಿಸಬಹುದಾದ ಸಂಸ್ಕೃತಸೂಕ್ತಿ ಸುಭಾಷಿತಗಳು, ಸಂಸ್ಕೃತ ಲೌಕಿಕನ್ಯಾಯಗಳು, ಉಪಯುಕ್ತ ಮಾಹಿತಿಗಳು ಪುಸ್ತಕದಲ್ಲಿವೆ.

**ಯಕ್ಷಗಾನ ನಟ ಸಂಘಟಕ ಕೆರೆಮನೆ ಶಂಭು ಹೆಗಡೆ – ಪರಂಪರೆ ಮತ್ತು ಹೊಸಮಾರ್ಗ : ಅಧ್ಯಯನ**
ಡಾ. ಜಿ. ಎಸ್. ಭಟ್ಟ
ನಿಧಿ ಪ್ರಕಾಶನ, ವಿನೋಬಾ ನಗರ, ಸಾಗರ
ಪ್ರ. 2004 ಪು. 461
ಕೆರೆಮನೆ ಶಂಭುಹೆಗಡೆಯವರ ಬಗೆಗೆ ಮಾಡಿದ ಪಿಎಚ್. ಡಿ. ಅಧ್ಯಯನ ಪ್ರಬಂಧದ ಮುದ್ರಿತ ರೂಪ. 16 ಪುಟಗಳಲ್ಲಿ 85 ವರ್ಣಭಾವಚಿತ್ರಗಳು. 11 ವಿಭಾಗಗಳಲ್ಲಿ ವಿಷಯ ವಿವರಣೆ. ಕೆರೆಮನೆ ಶಂಭು ಹೆಗಡೆಯವರ ಮುನ್ನುಡಿಯಿದೆ. ಕ್ಷೇತ್ರಕಾರ್ಯಾಧಾರಿತ ಗ್ರಂಥ. ಶಂಭು ಹೆಗಡೆಯವರ ಸಾಧನೆಗಳ ಸಮಗ್ರ ವಿವೇಚನೆ ಇಲ್ಲಿದೆ. ಯಕ್ಷಗಾನ ಕಲಾವಿದರೊಬ್ಬರ ಸಮಗ್ರ ಸಾಧನೆಯ ಬಗೆಗೆ ಬಂದ ಮೊತ್ತಮೊದಲ ಪಿಎಚ್.ಡಿ. ಪ್ರಬಂಧ. (ಪುಸ್ತಕದ ಹೊರಪುಟದಲ್ಲಿ ಗ್ರಂಥಶೀರ್ಷಿಕೆ 'ಕೆರೆಮನೆ ಶಂಭು ಹೆಗಡೆ ಅಧ್ಯಯನ' ಎಂದು ಮಾತ್ರ ಇದೆ.

ಪ್ರ. 2005 ಪು. 128

ಶ್ರೀಕೃಷ್ಣ ಸಂಧಾನ, ಶ್ರೀರಾಮ ಪಟ್ಟಾಭಿಷೇಕ, ಪಂಚವಟಿ–ವಾಲಿಸುಗ್ರೀವರ ಕಾಳಗ, ಚೂಡಾಮಣಿ ಪ್ರಸಂಗ–ಲಂಕಾದಹನ – ಈ ನಾಲ್ಕು ಪ್ರಸಂಗಗಳ ಗದ್ಯ ನಿರೂಪಣೆ. ಪ್ರಸಂಗಗಳ ಗದ್ಯಾನುವಾದರೂಪದ ಮೊತ್ತಮೊದಲ ಗ್ರಂಥ.

**ಯಕ್ಷಗಾನ ಬಯಲಾಟ**

ಶಿವರಾಮ ಕಾರಂತ

ಹರ್ಷ ಪ್ರಕಟನಾಲಯ, ಪುತ್ತೂರು

ಪ್ರ. 1957

(ವಿವರಗಳು ದ್ವಿತೀಯ ಮುದ್ರಣದ ಬಗೆಗಿವೆ. ದ್ವಿತೀಯ ಮುದ್ರಣ ವಿಸ್ತೃತ ಮತ್ತು ಪರಿಷ್ಕೃತ.)

**ಯಕ್ಷಗಾನ ಬಯಲಾಟ**

ಶಿವರಾಮ ಕಾರಂತ

ಹರ್ಷ ಪ್ರಕಟನಾಲಯ, ಪುತ್ತೂರು, ದ.ಕ.

ದ್ವಿ. ಮು. 1963 (ಪ್ರ. ಮು. 1957) ಪು. 272

ಸಮಗ್ರ ಯಕ್ಷಗಾನದ ವಿವೇಚನೆ ಮಾಡಿ ಬರೆದ ಮೊದಲನೆಯ ಸಂಶೋಧನ ಗ್ರಂಥ. ಪರಿಚಯ, ಹುಟ್ಟು, ವೇಷಭೂಷಣ, ರೂಪಾಂತರಗಳು, ಪುನರುಜ್ಜೀವನ ಮೊದಲಾದ ಸಮಸ್ತ ವಿವರಗಳು ಮೊದಲ ಭಾಗದಲ್ಲಿವೆ. ಎರಡನೆಯ ಭಾಗದಲ್ಲಿ ಯಕ್ಷಗಾನ ಕವಿಕೃತಿ ಪರಿಚಯವಿದೆ. ವಿವಿಧ ಭಾವಚಿತ್ರಗಳಿವೆ. ಮೊದಲ ಮುದ್ರಣಕ್ಕಿಂತ ತುಂಬ ವಿಸ್ತರಣೆ ಪರಿಷ್ಕರಣೆಗೊಂಡ ರೂಪದಲ್ಲಿದೆ. ಬಡಗುತಿಟ್ಟು ಯಕ್ಷಗಾನವನ್ನೇ ಮುಖ್ಯವಾಗಿ ವಿವರಿಸಲಾಗಿದೆ.

**ಯಕ್ಷಗಾನ ಭಾಗವತನೊಬ್ಬನ ಅನುಭವಗಳು**

ಕೋಟ ಶ್ರೀನಿವಾಸ ನಾಯಕ

ಲೇಖಕರೇ ಪ್ರಕಾಶಕರು

ಪ್ರ. 1977 ಪು. 222

ಆತ್ಮಕಥೆಯ ರೀತಿಯ ಬರವಣಿಗೆ. 1971–72ರಲ್ಲಿ ಬರೆದುದು. ಶಿವರಾಮ ಕಾರಂತರ ಮುನ್ನುಡಿ. ಬಡಗುತಿಟ್ಟಿನ ಯಕ್ಷಗಾನದ ಹಳೆಯ ಸ್ಥಿತಿಗತಿಗಳನ್ನು ಅನುಭವ ಮಾಡಿಕೊಳ್ಳಬಹುದಾದ ಬರವಣಿಗೆ. ಒಂದು ಮೇಳಕ್ಕೆ ಬೇಕಾಗುವ ಸಮಗ್ರ ಸಾಮಾನು ಸಲಕರಣೆಗಳ ಪಟ್ಟಿಯೂ ಇದೆ.

**ಯಕ್ಷಗಾನ ಮಕರಂದ**

ಪ್ರ. ಸಂ. ಮುಳಿಯ ಮಹಾಬಲ ಭಟ್ಟ; ಸಹಸಂ. ಎಂ. ಪ್ರಭಾಕರ ಜೋಶಿ, ಅಮೃತ ಸೋಮೇಶ್ವರ, ಎಂ. ವಾಸುದೇವ ಭಟ್ಟ

ಪ್ರ. 1980 ಪು. 223+603





ಪೊಳಲಿ ಶಂಕರನಾರಾಯಣ ಶಾಸ್ತ್ರಿ ಸಂಸ್ಮರಣ ಗ್ರಂಥ. ಎರಡು ಭಾಗಗಳ ಸಮಗ್ರ ಸಂಪುಟ. ಶಾಸ್ತ್ರಿ ಸಂಸ್ಮರಣದ 40 ಲೇಖನಗಳು, ನೆನಪುಗಳು ಮೊದಲನೆಯ 'ವ್ಯಕ್ತಿ' ಭಾಗದಲ್ಲಿವೆ. 'ಕಲೆ' ಭಾಗದಲ್ಲಿ 61 ಲೇಖನಗಳಿವೆ. ಯಕ್ಷಗಾನದ ವಿವಿಧ ವಿಷಯಗಳು ಮತ್ತು ಸಮಾಂತರ ರಂಗಕಲೆಗಳ ಬಗೆಗೆ ವಿವಿಧ ವಿದ್ವಾಂಸರ ಲೇಖನಗಳಿವೆ. ಎರಡನೆಯ ಭಾಗವು 'ರಂಗಸ್ಥಳ' ಎಂಬ ಹೆಸರಿನ ಪ್ರತ್ಯೇಕ ಪುಸ್ತಕವಾಗಿಯೂ ಪ್ರಕಟಗೊಂಡಿದೆ.

**ಯಕ್ಷಗಾನ ಮತ್ತು ನಾನು**

ಶೇಣಿ ಗೋಪಾಲಕೃಷ್ಣ ಭಟ್ಟ

ಶೇಣಿ ಸನ್ಮಾನ ಸಮಿತಿ, ಕನ್ನಡ ಸಂಘ, ಸಂತ ಫಿಲೋಮಿನಾ ಕಾಲೇಜು, ಪುತ್ತೂರು

ಪ್ರ. 1981 ಪು. 134

ಹಿರಿಯ ಯಕ್ಷಗಾನ ಕಲಾವಿದ ಶೇಣಿ ಗೋಪಾಲಕೃಷ್ಣ ಭಟ್ಟರ ಆತ್ಮಕಥನ. ಪರಿಸರ, ಹೊಸಬಯಕೆಯ ಒಕ್ಕಲು, ಯಕ್ಷಲೋಕದ ಹಾದಿಯಲ್ಲಿ, ಸಂಚಾಲಕನಾಗಿ ಮತ್ತು ನಟನಾಗಿ, ವಿವೇಚನೆ – ನಿವೇದನೆ – ಎಂಬ ಐದು ವಿಭಾಗಗಳಲ್ಲಿ ಆತ್ಮಕಥನವಿದೆ. 21 ಭಾವಚಿತ್ರಗಳಿವೆ. ಹರಿದಾಸ, ವೇಷಧಾರಿ, ಅರ್ಥಧಾರಿ ಎಂಬ ಶೇಣಿಯವರ ಮೂರು ವ್ಯಕ್ತಿತ್ವದ ಸ್ವಾವಲೋಕನ ಇದರಲ್ಲಿದೆ. ಪುಸ್ತಕರೂಪದಲ್ಲಿ ಬಂದ ಯಕ್ಷಗಾನ ಕಾಲವಿದರೊಬ್ಬರ ಮೊತ್ತಮೊದಲ ಆತ್ಮವೃತ್ತ.

**ಯಕ್ಷಗಾನ ಮಹಾಬಲ**

ಸಂ. ಎಲ್. ಎಸ್. ಶಾಸ್ತ್ರೀ, ನಾಜಗಾರ

ಶೃಂಗಾರಮಂಪಟ ಪ್ರಕಾಶನ, ಹೊನ್ನಾವರ

ಯಕ್ಷಗಾನ ಕಲಾವಿದ ಕೆರೆಮನೆ ಮಹಾಬಲ ಹೆಗಡೆಯವರ ಬಗೆಗೆ ಲೇಖನಗಳ ಸಂಕಲನ. ಅಭಿನಂದನರೂಪದ ಗ್ರಂಥ.

**ಯಕ್ಷಗಾನ ಮಹಾಭಾರತ ಪ್ರಸಂಗಗಳು**

ಡಾ. ಸಿ. ಆನಂದರಾಮ ಉಪಾಧ್ಯ

ಕೃತಿ ಪ್ರಕಾಶನ, ಬೆಂಗಳೂರು

ಪ್ರ. 1990 ಪು. 354

ಪಿಎಚ್.ಡಿ ಅಧ್ಯಯನ ಪ್ರೌಢಪ್ರಬಂಧದ ಪುಸ್ತಕರೂಪ. ಅಧ್ಯಯನದ ಉದ್ದೇಶ, ವ್ಯಾಪ್ತಿ, ಯಕ್ಷಗಾನದ ಉಗಮ ವಿಕಾಸ, ಭಾರತ ಪರಂಪರೆ, ಯಕ್ಷಗಾನದ ಮಹಾಭಾರತ ಪ್ರಸಂಗಗಳು – ವಸ್ತು ವಿವರಣೆ, ಪ್ರಸಂಗಗಳಲ್ಲಿ ಸಾಹಿತ್ಯಸ್ವರೂಪ, ಪ್ರಸಂಗಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಂಗಗಳಲ್ಲಿ ಸಾಮಾಜಿಕ ಅಂಶಗಳು, ಯಕ್ಷಗಾನ ಪ್ರಸಂಗಗಳ ಪ್ರಯೋಗವೈವಿಧ್ಯ, ಮಹಾಭಾರತದ ಪ್ರಸಂಗಕಾರರು, ಸಮಾರೋಪ – ಹೀಗೆ ಹತ್ತು ಅಧ್ಯಾಯಗಳಲ್ಲಿ ವಿಷಯ ವಿವರಣೆಯಿದೆ.

**ಯಕ್ಷಗಾನ ಮುಖವರ್ಣಿಕೆ**

ಸಂ. ಎಚ್. ಬಿ. ಎಲ್. ರಾವ್

**ಯಕ್ಷಗಾನ ವಿಶ್ವದರ್ಶನ**
ಸಂ. ಅ. ಗಣಪಯ್ಯ ಅಲ್ಸೆ
ಕಲಾಮಯೂರಿ, ಬೆಂಗಳೂರು
ಪ್ರ. 1978 ಪು. 191
ಯಕ್ಷಗಾನದ ಪರಿಚಯ ವಿಮರ್ಶೆ ವಿವೇಚನೆಗಳುಳ್ಳ ಲೇಖನಗಳ ಸಂಕಲನ. ವಿವಿಧ ಲೇಖಕರ 18 ಪ್ರಬಂಧಗಳು ಇಲ್ಲಿ ಒಟ್ಟು ಸೇರಿವೆ.

**ಯಕ್ಷಗಾನ ವ್ಯಾಪಾರ**
ಬಾ. ಸಾಮಗ, ಮಲ್ಪೆ
ತುಳುನಾಡ್ ಪ್ರಗತಿ ಕಾರ್ಯಾಲಯ, ಮಲ್ಪೆ
ಪ್ರ. 1981 ಪು. 18.
ಯಕ್ಷಗಾನ ಮೇಳಗಳ ವ್ಯವಸ್ಥೆ ಇತ್ಯಾದಿಗಳ ಬಗೆಗಿನ ಲೇಖನದ ಪುಸ್ತಕರೂಪ.

**ಯಕ್ಷಗಾನ ಸಂಗೀತ**
ಎಂ. ರಾಜಗೋಪಾಲಾಚಾರ್ಯ
ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ
ಪ್ರ. 1977 (ದ್ವಿ. ಮು. 1995) ಪು.206 (ದ್ವಿಮು. ಪು. 184)
ಯಕ್ಷಗಾನ ಸಂಗೀತದ ಸಮಗ್ರ ವಿವೇಚನೆ. ಈ ಬಗೆಗಿನ ಮೊತ್ತಮೊದಲ ಆಕರ ಗ್ರಂಥ, ಯಕ್ಷಗಾನಸಂಗೀತ, ತಾಳಪ್ರಕರಣ, ರಾಗಲಕ್ಷಣಗಳು ಎಂಬ ಮೂರು ಭಾಗಗಳಲ್ಲಿದೆ. ಶಾಸ್ತ್ರೀಯವಾದ ಬರವಣಿಗೆಯ ವಿಧಾನದಲ್ಲಿ ಸಂಗೀತ ವಿವೇಚನೆಯಿದೆ.

**ಯಕ್ಷಗಾನ ಸಾಹಿತ್ಯ**
ಡಾ. ಕೆ. ಎಂ. ಕೃಷ್ಣ ರಾವ್
ಮಿಂಚಿನಬಳ್ಳಿ ಪ್ರಕಾಶನ, ಧಾರವಾಡ
ಪ್ರ. 1956 ಪು. 106
ಯಕ್ಷಗಾನ ಸಾಹಿತ್ಯದ ಪರಿಚಯ ಕೃತಿ. ಯಕ್ಷಗಾನ ಸಾಹಿತ್ಯಕ್ಕೆ ಸಂಬಂಧಿಸಿದ ಮೊತ್ತ ಮೊದಲ ಕೃತಿ. ಕೊನೆಗೆ ಪ್ರಸಂಗಗಳ ಪಟ್ಟಿಯಿದೆ.

**ಯಕ್ಷಗಾನ ಸೀಮೋಲ್ಲಂಘನ**
ಸಂ. ಕಾರ್ಕಡ ಶ್ರೀನಿವಾಸ ಉಡುಪ
ಮಕ್ಕಳ ಮೇಳ, ಸಾಲಿಗ್ರಾಮ, ದ. ಕ.
ಪ್ರ. 1988 ಪು. 100
ಯಕ್ಷಗಾನ ಮಕ್ಕಳ ಮೇಳ, ಸಾಲಿಗ್ರಾಮ – ಇದರ ಸಂಸ್ಮರಣ ಸಂಪುಟ. ಸಾಗಿ ಬಂದ ದಾರಿ, ನೆನಪಿನಾಳದಿಂದ ಎಂಬ ಲೇಖಗಳಲ್ಲಿ ಉಡುಪರು ಮಕ್ಕಳ ಮೇಳದ ವಿದೇಶ ಯಾತ್ರೆಯ ಅನುಭವಗಳನ್ನು ವಿವರಿಸಿದ್ದಾರೆ. 'ಯಕ್ಷಲೋಕದ ಸಿಹಿ ನೆನಹುಗಳು' ಭಾಗದಲ್ಲಿ 40 ಪುಟ್ಟ ನೆನಪುಗಳಿವೆ. ಇತರ 10 ಲೇಖನಗಳು, ವರ್ಣಚಿತ್ರಗಳು, ಮಕ್ಕಳ ಮೇಳದ ಮಾಹಿತಿಗಳು ಇವೆ.





**ಯಕ್ಷಗಾನ ಸೌರಭ**
ಮಲ್ಪೆ ಶಂಕರನಾರಾಯಣ ಸಾಮಗ
ಗ್ರಾಮ ಸೇವಾ ಪ್ರತಿಷ್ಠಾನ, ಮಣಿಪಾಲ
ಪ್ರ. 1961
ಯಕ್ಷಗಾನದ ಬಗೆಗಿನ ವಿವರಣಾತ್ಮಕ ಲೇಖನವುಳ್ಳ ಕೃತಿ.

**ಯಕ್ಷಗಾನ ಸ್ವಬೋಧಿನಿ**
ಭಾಗವತ ನೀಲಾವರ ರಾಮಕೃಷ್ಣಯ್ಯ
ಪ್ರ. 1986 ಪರಿಷ್ಕೃತ ದ್ವಿತೀಯ ಆವೃತ್ತಿ 2003 ಪು. 287, ದ್ವಿಮು. ಪು. 3
ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ
ಪರಿಷ್ಕರಣಕಾರರು ಗುರು ನೀಲಾವರ ರಾಮಕೃಷ್ಣಯ್ಯ ಮತ್ತು ಭಾಗವತ ಗೋರ್ಪಾಡಿ ವಿಠಲ ಪಾಟೀಲ.
ಉಡುಪಿಯ ಯಕ್ಷಗಾನ ಕೇಂದ್ರದ ಯಕ್ಷಗಾನ ಅಧ್ಯಯನದ ಪಠ್ಯಗ್ರಂಥ. ಬಡಗುತಿಟ್ಟಿನ ಬಾಯಿತಾಳಗಳ ಸಹಿತವಾಗಿ ಎಂಟು ಅಧ್ಯಾಯಗಳಲ್ಲಿ ವಿವರಗಳಿವೆ.

**ಯಕ್ಷಗಾನ ಸ್ವರ್ಣಕಂಕಣ**
ಸಂ. ಎಚ್. ಬಿ. ಎಲ್. ರಾವ್
ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ
ಪ್ರ. 2002 ಪು. 73
ಹತ್ತನೆಯ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟಗೊಂಡ ಕೃತಿ. ಹತ್ತು ಸಮ್ಮೇಳನಗಳಲ್ಲಿ ಮಂಡಿತವಾದ ಪ್ರಬಂಧಗಳಲ್ಲಿ ಆಯ್ದ ಲೇಖನಗಳ ಸಂಕಲನ. ಅಗಲಿದ ಕಲಾವಿದರ ಬಗೆಗಿನ ಲೇಖನಗಳೂ ಸೇರಿವೆ.

**ಯಕ್ಷಗಾನ ಸ್ವರ್ಣನೂಪುರ**
ಪ್ರ. ಸಂ. ಎಚ್. ಬಿ. ಎಲ್. ರಾವ್
ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ
ಪ್ರ. 2000 ಪು. 75
ಪದವೀಧರ ಯಕ್ಷಗಾನ ಸಮಿತಿಯ ಸಾಧನೆಗಳು, ಪ್ರಕಟಿತ ಪುಸ್ತಕಗಳ ದಾಖಲೆಗಳ ಬಗೆಗೆ ಲೇಖನ ಸೇರಿ 20ನೆಯ ಶತಮಾನದ ಮುಖ್ಯ ಹಿಮ್ಮೇಳ, ಮುಮ್ಮೇಳ, ತಾಳಮದ್ದಳೆ ಕಲಾವಿದರ ಪರಿಚಯಲೇಖನಗಳು. ಒಟ್ಟು 7 ಲೇಖನಗಳು.

**ಯಕ್ಷಗಾನ ಹಸ್ತಪ್ರತಿಗಳ ವಿವರಣ ಸೂಚಿ**
ಸಂ. ಗೌ. ಮ. ಉಮಾಪತಿ ಶಾಸ್ತ್ರಿ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ
ಪ್ರ. 1994 ಪು. 448
ಯಕ್ಷಗಾನ ಹಸ್ತಪ್ರತಿಗಳ ಬಗೆಗೆ ಬಂದ ಮೊತ್ತಮೊದಲ ವಿವರಣಾತ್ಮಕ ಸೂಚಿ. ಧರ್ಮಸ್ಥಳದ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನದಲ್ಲಿ ಸಂಗ್ರಹಗೊಂಡ

**ಯಕ್ಷರಂಗ**
ರವಿ ರಾ. ಅಂಚನ್
ಕನ್ನಡ ಸಾಹಿತ್ಯ ಸಂಗಮ, ಮುಂಬಯಿ
ಪ್ರ. 1992 ಪು. 94
ಮುಂಬಯಿಯ ಯಕ್ಷಗಾನ ಸ್ಥಿತಿಗತಿಗಳನ್ನು ನಿರೂಪಿಸುವ ಲೇಖನಗಳೊಡನೆ ವಾಮಪಂಥೀಯ ನಿಲುವಿನಿಂದ ಯಕ್ಷಗಾನ ಕ್ಷೇತ್ರವನ್ನು ವಿಮರ್ಶಿಸಿದ ಲೇಖನಗಳು. ಒಟ್ಟು 10 ಲೇಖನಗಳಿವೆ.

**ಯಕ್ಷರಂಗಕ್ಕಾಗಿ**
ಲೇ. ಡಾ. ಕೆ. ಶಿವರಾಮ ಕಾರಂತ
ಸಂ. ಬಿ. ಮಾಲಿನಿ ಮಲ್ಯ
ಶಿವರಾಮ ಕಾರಂತ ಅಧ್ಯಯನ ಕೇಂದ್ರ, ವಿವೇಕಾನಂದ ಕಾಲೇಜು, ಪುತ್ತೂರು
ಸಾಂಪ್ರದಾಯಿಕ ಯಕ್ಷಗಾನ ರಂಗಭೂಮಿಯ ಆಧಾರದಿಂದ ಯಕ್ಷಗಾನ ಬ್ಯಾಲೆಯನ್ನು ರೂಪಿಸಿಕೊಂಡು ಡಾ. ಕಾರಂತರು ಮಾಡಿದ ಸಾಧನೆಗಳ ಬಗೆಗೆ ಅವರೇ ಬರೆದ ವಿವರಗಳು ಮತ್ತು ಅದಕ್ಕಾಗಿ ಉಪಯೋಗಿಸಿದ ಯಕ್ಷಗಾನ ಪ್ರಸಂಗಗಳ ಸಂಪಾದಿತ ಪದ್ಯಗಳು ಮತ್ತು ರಂಗಸೂಚನೆಗಳ ಕೈಪಿಡಿ. ಈ ಪ್ರಯೋಗಗಳ ಬಗೆಗೆ ವಿವಿಧ ವ್ಯಕ್ತಿಗಳ ಅಭಿಪ್ರಾಯಗಳೂ ಇಲ್ಲಿವೆ.

**ಯಕ್ಷರಂಗಕ್ಕಾಗಿ ಪ್ರವಾಸ**
ಕೆ. ಶಿವರಾಮ ಕಾರಂತ
ಎಸ್. ಬಿ. ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು
ಪ್ರ. 1992 ಪು. 72
ಯಕ್ಷಗಾನ ತಂಡದೊಂದಿಗೆ ಪ್ರವಾಸ ಮಾಡಿದ ಅನುಭವ ಕಥನರೂಪದ ಕೃತಿ. ರಷ್ಯಾ, ಕೊಲ್ಲಿ ರಾಷ್ಟ್ರಗಳು, ದಕ್ಷಿಣ ಅಮೆರಿಕದ ಪೆರು, ಬ್ರೆಜಿಲ್ ಮೊದಲಾದ ದೇಶಗಳಲ್ಲಿ ಯಕ್ಷಗಾನ ಪ್ರದರ್ಶನದ ವಿವರಗಳಿವೆ. ಅದರೊಂದಿಗೆ ಪೆರು ದೇಶದ ಪ್ರಾಚೀನ ಸಂಸ್ಕೃತಿಯ ವಿವರಗಳೂ ಇವೆ.

**ಯಕ್ಷರಂಗ – ಪದವಿನ್ಯಾಸ**
ಹೆರಂಜೆ ಕೃಷ್ಣ ಭಟ್ಟ
ಯಕ್ಷಗಾನ ಕೇಂದ್ರ, ಎಂ. ಜಿ. ಎಂ. ಕಾಲೇಜು, ಉಡುಪಿ
ಪ್ರ. 2006
ಯಕ್ಷಗಾನ ಕೇಂದ್ರದ ಹೊಸ ಕಲಾಸಮುಚ್ಚಯದ ಉದ್ಘಾಟನ ಸಂದರ್ಭದಲ್ಲಿ ಸಿದ್ಧಪಡಿಸಿದ, ಕೇಂದ್ರದ ಇತಿಹಾಸ ಮತ್ತು ವರ್ತಮಾನ ಭವಿಷ್ಯತ್ತುಗಳ ಬಗೆಗೆ ಪರಿಚಯಾತ್ಮಕ ಕೃತಿ. ಭಾವಚಿತ್ರಗಳೂ ಇವೆ.

**ಯಕ್ಷರತ್ನ**
ಸಂ. ಎಚ್. ಬಿ. ಎಲ್. ರಾವ್, ಪೆರ್ಲ ಕೃಷ್ಣ ಭಟ್ಟ





ಪದವೀದರ ಯಕ್ಷಗಾನ ಸಮಿತಿ, ಮುಂಬಯಿ
ಪ್ರ. 1993 ಪು. 202
1991ರಲ್ಲಿ ಮುಂಬಯಿಯಲ್ಲಿ ನಡೆದ ಐದನೆಯ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಸಂಸ್ಮರಣ ಗ್ರಂಥ. ಸಮ್ಮೇಳನದ ಲೇಖನಗಳ ಸಂಕಲನ. 6 ಮಂದಿ ದಿವಂಗತ ಕಲಾವಿದರ ಬಗೆಗೆ ಲೇಖನಗಳು, ಅಧ್ಯಕ್ಷ ಭಾಷಣಗಳೂ ಸೇರಿ ಯಕ್ಷಗಾನದ ವಿವಿಧ ವಿಷಯಗಳಿಗೆ ಸಂಬಂಧಿಸಿದ 11 ಲೇಖನಗಳಿವೆ.

**ಯಕ್ಷರಸ ಜೀವನ**
ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟ
ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟ ಸನ್ಮಾನ ಸಮಿತಿ, ಪೆರಡಾಲ
ಪ್ರ. 1981 ಪು. 143
'ಕೀರಿಕ್ಕಾಡು ಮಾಸ್ತರ್' ಎಂದೇ ಪ್ರಸಿದ್ಧರಾದ ಕೀರಿಕ್ಕಾಡು ವಿಷ್ಣು ಭಟ್ಟರ ಆತ್ಮಕಥೆ. 'ಹುಟ್ಟೂರ ನೆರಳಲ್ಲಿ' ಎಂಬ ಮೊದಲ ಅಧ್ಯಾಯದಲ್ಲಿ 23 ವಿಭಾಗಗಳೂ 'ನೆಲೆನಿಂತ ನೆಲದಲ್ಲಿ' ಎಂಬ ಅಧ್ಯಾಯದಲ್ಲಿ 16 ವಿಭಾಗಗಳೂ ಇವೆ. ಅನುಬಂಧದಲ್ಲಿ ಅವರ ಕೃತಿಗಳ ಪಟ್ಟಿಯಿದೆ.

**ಯಕ್ಷರಾಜ ಐರೋಡಿ ಗೋವಿಂದಪ್ಪ**
ಪ್ರ. ಸಂ. ಕೂರಾಡಿ ಸದಾಶಿವ ಕಲ್ಕೂರ; ಸಹಸಂ. ಹಂದಾಡಿ ಸುಬ್ಬಣ್ಣ ಭಟ್ಟ, ಎಚ್. ಶ್ರೀಧರ ಹಂದೆ, ಟಿ. ಅಂಗರ
ಐರೋಡಿ ಗೋವಿಂದಪ್ಪ ಸನ್ಮಾನ ಸಮಿತಿ, ಬ್ರಹ್ಮಾವರ
ಪ್ರ. 2001 ಪು. 48
ಬಡಗುತಿಟ್ಟಿನ ಕಲಾವಿದ ಐರೋಡಿ ಗೋವಿಂದಪ್ಪನವರ ಬಗೆಗಿನ ಪರಿಚಯಾತ್ಮಕ, ಅಭಿನಂದನಾತ್ಮಕ ಲೇಖನಗಳ ಸಂಕಲನ. 10 ಲೇಖನಗಳು, 8 ಭಾವಚಿತ್ರಗಳು ಇವೆ. ಮೂರು ಲೇಖನಗಳು ಯಕ್ಷಗಾನ ಸಾಮಾನ್ಯ ವಿಷಯದವು.

**ಯಕ್ಷಲಕ್ಷ್ಮೀ**
ಸಂ. ಎಚ್. ಬಿ. ಎಲ್. ರಾವ್
ಪದವೀದರ ಯಕ್ಷಗಾನ ಸಮಿತಿ, ಮುಂಬಯಿ
ಪ್ರ. 1998 ಪು. 68
1996ರಲ್ಲಿ ನಡೆದ ಏಳನೆಯ ಯಕ್ಷಗಾನ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಲಾದ ಪ್ರಬಂಧಗಳ ಸಂಕಲನ. ಒಟ್ಟು ಎಂಟು ಲೇಖನಗಳಿವೆ. ಮೊದಲು ಸಮ್ಮೇಳನದ ವಿವರಕ್ಕಾಗಿ ಆಮಂತ್ರಣಪತ್ರಿಕೆಯೂ ಇದೆ.

**ಯಕ್ಷಲೋಕದ ಕೋಲ್ಮಿಂಚು**
ಸಂ. ಎಲ್. ಕೃಷ್ಣಪ್ಪ
(ಸಂಪಾದಕರೇ ಪ್ರಕಾಶಕರು)

ಯಕ್ಷ ಭಾಗವತಿಕೆ
ಡಾ. ಕೆ.ಎಂ. ರಾಘವ ನಾಂಬಿಯಾರ್
ನವಸುಧಾ ಪ್ರಕಾಶನ ಬೆಂಗಳೂರು ಪು: 88 ಬೆಲೆ: 60/-



ಸಾಲಿಗ್ರಾಮ ಮಕ್ಕಳ ಮೇಳ, ಕೋಟ, ಉಡುಪಿ
ಪ್ರ. 2005 ಪು. 124

ಬಡಗುತಿಟ್ಟಿನ ಯಕ್ಷಗಾನ ಮೇಳಗಳಿಗೆ ಕಾಯಕಲ್ಪ ನೀಡಿದವರೆಂದು ಹೆಸರಾದ ಶ್ರೀ ಪಿ. ಶ್ರೀಧರ ಹಂದೆಯವರ ಅಭಿನಂದನ ಗ್ರಂಥ. ಯಜಮಾನರಾಗಿ ಹಂದೆಯವರ ಕೊಡುಗೆಯ ಬಗೆಗಿನ ಲೇಖನಗಳು, ಭಾವಚಿತ್ರಗಳು ಮತ್ತು ಇತರ ಮೇಳ ಸಂಘಟಕರ ಬಗೆಗೆ ಮಾಹಿತಿಗಳಿವೆ.

**ರಂಗದ ರಂಗೋಲಿ**

ಟಿ. ಎಸ್. ಅಂಬುಜಾ
ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ
ಪ್ರ. 1998 ಪು. 180

ಯಕ್ಷಗಾನ ಕ್ಷೇತ್ರದಲ್ಲಿ ದೊಡ್ಡ ಸಾಮಗರೆಂದೇ ಪ್ರಸಿದ್ಧರಾದ ಮಲ್ಪೆ ಶಂಕರನಾರಾಯಣ ಸಾಮಗರ ಜೀವನದಲ್ಲಿ ನಡೆದ ನೂರಾರು ಸ್ವಾರಸ್ಯಕರ ಘಟನೆಗಳ ನಿರೂಪಣೆ. 'ವೃತ್ತಿ ಜೀವನದ ಮಧ್ಯೆ' ಭಾಗದಲ್ಲಿ 13 ಶೀರ್ಷಿಕೆಗಳು, 'ನಿಜಜೀವನದ ದಾರಿಯಲ್ಲಿ' ವಿಭಾಗದಲ್ಲಿ 7 ಶೀರ್ಷಿಕೆಗಳಿವೆ. ಅನುಬಂಧದಲ್ಲಿ ವಂಶವೃಕ್ಷ, ಸಹಕಲಾವಿದರ ಪಟ್ಟಿ, ಮಾಹಿತಿ ನೀಡಿದವರ ಪಟ್ಟಿ ಇತ್ಯಾದಿಗಳಿವೆ.

**ರಂಗಪ್ರಸಂಗ**

ಪ್ರೊ. ಎಂ. ರಾಜಗೋಪಾಲಾಚಾರ್ಯ
ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ
ಪ್ರ. 1986 ಪು. 53

1984–85ರಲ್ಲಿ ನಡೆದ ತೆಂಕು ಬಡಗು ತಿಟ್ಟುಗಳ ಯಕ್ಷಗಾನ ಕಮ್ಮಟಗಳ ವಿವರಗಳನ್ನು ದಾಖಲಿಸುವ ಪುಸ್ತಕ.

**ರಂಗವೈಖರಿ**

ಸಂ. ಪಾದೆಕಲ್ಲು ನರಸಿಂಹ ಭಟ್ಟ, ಪಾದೇಕಲ್ಲು ವಿಷ್ಣು ಭಟ್ಟ
ಶ್ರೀ ಮಾಂಬಾಡಿ ನಾರಾಯಣ ಭಾಗವತರ ಸನ್ಮಾನ ಸಮಿತಿ, ಮಿತ್ತನಡ್ಕ, ಕರೋಪಾಡಿ, ದ. ಕ.
ಪ್ರ. 1981 ಪು. 233

ಮಾಂಬಾಡಿ ನಾರಾಯಣ ಭಾಗವತರ ಅಭಿನಂದನ ಗ್ರಂಥ. ವ್ಯಕ್ತಿ, ತಾಂತ್ರಿಕತೆ – ಸಾಮಾನ್ಯ ಸೂಚನೆಗಳು ಮತ್ತು ವ್ಯಾಪ್ತಿ, ವಿಶಿಷ್ಟತೆ ಎಂಬ ಮೂರು ವಿಭಾಗಗಳಲ್ಲಿ ಲೇಖನಗಳು ವಿಭಾಗಿಸಲ್ಪಟ್ಟಿವೆ. ಮೊದಲ ವಿಭಾಗದಲ್ಲಿ ಐದು, ಎರಡನೆಯದರಲ್ಲಿ ಹದಿನೇಳು ಮತ್ತು ಮೂರನೆಯದರಲ್ಲಿ ಆರು ಲೇಖನಗಳಿವೆ. ಎರಡನೆಯ ವಿಭಾಗದಲ್ಲಿ ಯಕ್ಷಗಾನದೊಳಗಿನ ವಿಷಯಗಳ ಬಗೆಗೆ ಮಾತ್ರವಲ್ಲ, ಇತರ ಪ್ರದೇಶಗಳ ಸಮಾನಾಂತರ ರಂಗಕಲೆಗಳ ಬಗೆಗೂ ಬರಹಗಳಿವೆ. ಯಕ್ಷಗಾನವನ್ನು ಅಮೂರ್ತಚಿಂತನ ಮತ್ತು ವೈಚಾರಿಕ ಅಧ್ಯಯನಗಳ ಚೌಕಟ್ಟಿಗೆ ಹೊಂದಿಕೆಯಾಗುವಂತೆ ಜೋಡಿಸುವ ಪ್ರಯತ್ನ ಮಾಡಲಾಗಿದೆಯೆಂಬುದು ಈ ಗ್ರಂಥದ ಸಂಪಾದಕರ ನಿಲುವು.





**ರಂಗಸ್ಥಳ**

ಪ್ರ. ಸಂ. ಮುಳಿಯ ಮಹಾಬಲ ಭಟ್ಟ; ಸಹಸಂ. – ಎಂ. ಪ್ರಭಾಕರ ಜೋಶಿ, ಅಮೃತ ಸೋಮೇಶ್ವರ, ಎಂ. ವಾಸುದೇವ ಭಟ್ಟ
ಪೊಳಲಿ ಶಾಸ್ತ್ರಿ ಸ್ಮಾರಕ ಸಮಿತಿ, ಮಂಗಳೂರು
ಪ್ರ. 1980 ಪು. 603

ಪೊಳಲಿ ಶಂಕರನಾರಾಯಣ ಶಾಸ್ತ್ರಿ ಸಂಸ್ಮರಣ ಗ್ರಂಥ ಯಕ್ಷಗಾನ ಮಕರಂದದ 'ಕಲೆ' ಎಂಬ ಎರಡನೆಯ ಭಾಗದ ಪ್ರತ್ಯೇಕ ಪುಸ್ತಕರೂಪ. ಯಕ್ಷಗಾನದ ವಿವಿಧ ವಿಷಯಗಳ ಬಗೆಗೆ, ಸಮಾಂತರ ಭಾರತೀಯ ರಂಗಕಲೆಗಳ ಬಗೆಗೆ ವಿಮರ್ಶಾತ್ಮಕ, ವಿಶ್ಲೇಷಣಾತ್ಮಕ ಲೇಖನಗಳ ಸಂಕಲನ. 61 ಲೇಖನಗಳಿವೆ. ಯಕ್ಷಗಾನದ ಬಗೆಗೆ ಡಾ. ವಿ. ರಾಘವನ್ ಬರೆದ ಅಮೂಲ್ಯ ಲೇಖನವೂ ಇದರಲ್ಲಿದೆ.

**ರಜತೋತ್ಸವ ಪ್ರಶಸ್ತಿ ಪುರಸ್ಕೃತ ಕಲಾವಿದರು**

ಯಕ್ಷಗಾನ ಕಲಾರಂಗ, ಉಡುಪಿ
ಪ್ರ. 2000 ಪು. 38

ಯಕ್ಷಗಾನ ಕಲಾರಂಗದ ರಜತೋತ್ಸವದ ಸಂದರ್ಭದಲ್ಲಿ ಪುರಸ್ಕೃತರಾದ ಕಲಾವಿದರ ಪರಿಚಯರೂಪದ ಕಿರುಹೊತ್ತಗೆ.

**ರಸಋಷಿ**

ಪ್ರ. ಸಂ. ಸರವು ರಾಮ ಭಟ್ಟ
ದೇರಾಜೆ ಸೀತಾರಾಮಯ್ಯ ಸನ್ಮಾನ ಸಮಿತಿ, ಬಾಳಿಲ, ದ. ಕ.
ಪ್ರ. 1974 ಪು. 119

ತಾಳಮದ್ದಳೆಯ ಹಿರಿಯ ಅರ್ಥಧಾರಿ ದೇರಾಜೆ ಸೀತಾರಾಮಯ್ಯನವರ ಅಭಿನಂದನ ಗ್ರಂಥ. ಮೊದಲ ಭಾಗದಲ್ಲಿ ಪರಿಚಯ, ಅಭಿನಂದನ, ಸಂದರ್ಶನ ಲೇಖನಗಳಿವೆ. ಇವು ಒಟ್ಟು 14. ಎರಡನೆಯ ಭಾಗದಲ್ಲಿ ದೇರಾಜೆ ಕೃತಿ ಸಮೀಕ್ಷೆಯ 7 ಲೇಖನಗಳು, ಮೂರನೆಯ ಭಾಗದಲ್ಲಿ ಯಕ್ಷಗಾನದ ಬಗೆಗಿನ 5 ಲೇಖನಗಳು ಇವೆ. ಕೆಲವು ಭಾವಚಿತ್ರಗಳೂ ಇವೆ.

**ರಸರಾಜ**

ಸಂ. ಜಿ. ಎಸ್. ಅವಧಾನಿ
ಚಿಟ್ಟಾಣಿ ರಾಮಚಂದ್ರ ಹೆಗಡೆ ಷಷ್ಟ್ಯಬ್ದ ಸಂಮಾನ ಸಮಿತಿ, ಹೊನ್ನಾವರ
ಪ್ರ. 1996

ಉ.ಕ. ಜಿಲ್ಲೆಯ ಪ್ರಸಿದ್ಧ ಕಲಾವಿದ ಚಿಟ್ಟಾಣಿ ರಾಮಚಂದ್ರ ಹೆಗಡೆಯವರ 60ರ ಅಭಿನಂದನ ಗ್ರಂಥ. ಲೇಖನಗಳ ಸಂಕಲನ. ಚಿಟ್ಟಾಣಿಯವರ ಸಾಧನೆ ಸಿದ್ಧಿಗಳ ದಾಖಲಾತಿ. ಉ.ಕ. ಜಿಲ್ಲೆಯ ಯಕ್ಷಗಾನದ ಬಗೆಗೆ ಅಮೂಲ್ಯ ಮಾಹಿತಿಗಳಿವೆ.

ಹಡಿನಬಾಳ ಸತ್ಯ ಹೆಗಡೆಯವರ ಅಭಿನಂದನ ಗ್ರಂಥ. ಎರಡು ಭಾಗಗಳಿವೆ. ಮೊದಲ ಭಾಗದಲ್ಲಿ ಸತ್ಯ ಹೆಗಡೆಯವರ ಜೀವನ ಸಾಧನೆ ಆಸಕ್ತಿ ಇತ್ಯಾದಿಗಳ ವಿವರಗಳುಳ್ಳ ಲೇಖನಗಳಿವೆ. ಎರಡನೆಯ ಭಾಗದಲ್ಲಿ ಉತ್ತರ ಕನ್ನಡದ ಯಕ್ಷಗಾನದ ಬಗೆಗೆ ಅಧ್ಯಯನಪೂರ್ಣ ಲೇಖನಗಳಿವೆ.

**ಸಮಗ್ರ ಯಕ್ಷಗಾನ – ಪರಂಪರೆ ಮತ್ತು ಪ್ರಯೋಗ**

ಸಂ. ಕು. ಶಿ. ಹರಿದಾಸ ಭಟ್ಟ
ರಾಷ್ಟ್ರಕವಿ ಗೋವಿಂದ ಪೈ ಸಂಶೋದನ ಕೇಂದ್ರ, ಉಡುಪಿ
ಪ್ರ. 1978 ಪು. 204

ಯಕ್ಷಗಾನದ ಬಗೆಗಿನ ವಿವಿಧ ಲೇಖಕರ ಲೇಖನಗಳ ಸಂಕಲನ. ಪರಂಪರೆ ಎಂಬ ಮೊದಲನೆಯ ಭಾಗದಲ್ಲಿ 13 ಲೇಖನಗಳಿವೆ; ಪ್ರಯೋಗ ಎಂಬ ಎರಡನೆಯ ಭಾಗದಲ್ಲಿ ಎಂಟು ಲೇಖನಗಳು ಇವೆ. 12 ಪುಟಗಳ ಚಿತ್ರಗಳಿವೆ. (ಕೆಲವು ಲೇಖನಗಳು ಪೂರ್ವ ಪ್ರಕಾಶಿತ)

**ಸಹಸ್ರ ಚಂದ್ರ**

ಸಂ. ಹಿರಣ್ಯ ವೆಂಕಟೇಶ್ವರ ಭಟ್ಟ
ಶ್ರೀ ಶೇಣಿ ಗೋಪಾಲಕೃಷ್ಣ ಭಟ್ಟ ಸಹಸ್ರಚಂದ್ರ ಅಭಿನಂದನ ಸಮಿತಿ, ಸುರತ್ಕಲ್ಲು
ಪ್ರ. 1999 ಪು. 258

ಯಕ್ಷಗಾನದ ಅಗ್ರಮಾನ್ಯ ಕಲಾವಿದ ಶೇಣಿ ಗೋಪಾಲಕೃಷ್ಣ ಭಟ್ಟರ ಅಭಿನಂದನ ಗ್ರಂಥ. ಶೇಣಿ ಪ್ರತಿಭಾಲೋಕ, ಶೇಣಿ ದರ್ಶನಾಲೋಕ, ಯಕ್ಷಗಾನಾಲೋಕ, ಜ್ಞಾನಾಲೋಕ, ಯಕ್ಷಗಾನ ಪ್ರಸಂಗಾಲೋಕ – ಎಂಬ ಐದು ಭಾಗಗಳಲ್ಲಿ 41 ಲೇಖನಗಳು ಮತ್ತು ಒಂದು ಪ್ರಸಂಗಸೂಚಿ ಇದೆ. ಜ್ಞಾನಾಲೋಕ ಭಾಗದ ಲೇಖನಗಳು ಯಕ್ಷಗಾನಕ್ಕಿಂತ ವಿಸ್ತೃತ ಕ್ಷೇತ್ರದವು. ಪ್ರಸಂಗಾಲೋಕವು ಯಕ್ಷಗಾನ ಪ್ರಸಂಗಸೂಚಿ.

**ಸಾಮಗಾಯಣ**

ನೆನಪುಗಳು : ಹರಿದಾಸ ಮಲ್ಪೆ ರಾಮದಾಸ ಸಾಮಗ
ನಿರೂಪಣೆ : ಟಿ. ಎಸ್. ಅಂಬುಜಾ
ಈಶಾವಾಸ ಪ್ರಕಾಶನ, ಲಕ್ಷ್ಮೀಂದ್ರ ನಗರ, ಉಡುಪಿ
ಪ್ರ. 2004 ಪು. 200

ಸಣ್ಣ ಸಾಮಗರೆಂದು ಯಕ್ಷಗಾನ ಹರಿಕತೆ ಕ್ಷೇತ್ರಗಳಲ್ಲಿ ಪ್ರಸಿದ್ಧರಾದ ಮಲ್ಪೆ ರಾಮದಾಸ ಸಾಮಗರ ಆತ್ಮಚರಿತ್ರೆ ಮತ್ತು ಅವರ ಅಭಿನಂದನ ರೂಪವಾದ ಕೆಲವು ಲೇಖನಗಳ ಸಂಯುಕ್ತ ಸಂಪುಟ. 126 ಪುಟಗಳ ಆತ್ಮಕಥೆ. ಅನಂತರ 23 ಅಭಿನಂದನ, ಪರಿಚಯ ಲೇಖನಗಳಿವೆ. ಈ ಲೇಖನಗಳು 'ಆಪ್ತ ಅಭಿಮಾನಿ–ಗಳೊಂದಿಗೆ' ಎಂಬ ಭಾಗದಲ್ಲಿದೆ. ಆತ್ಮಕಥೆ 10 ಅಧ್ಯಾಯಗಳಲ್ಲಿದೆ.

**ಸುದರ್ಶನ**

ಸಂ. ಜಿ. ಶಂಕರ ಭಟ್



ನಾಡು - ಆಡು ಕಾವ್ಯ (2011) (ರಂಗಚಿಂತನ)
ಡಾ. ಕೆ.ಎಂ. ರಾಘವ ನಾಂಬಿಯಾರ್
ಶ್ರೀ ಗಾಯತ್ರಿ ಆಫ್‌ಸೆಟ್ ಪ್ರಿಂಟರ್ಸ್, ಮೈಸೂರು-4
ಪುಟ 172 ಬೆಲೆ: ರೂ.100/-



ಪೆರ್ಲ ಕೃಷ್ಣ ಭಟ್ಟ ಸಪ್ತತಿ ಅಭಿನಂದನ ಸಮಿತಿ, ಪೆರ್ಲ, ಕಾಸರಗೋಡು
ಪ್ರ. 1994

ಯಕ್ಷಗಾನದ ಹಿರಿಯ ಅರ್ಥಧಾರಿ ಪೆರ್ಲ ಪಂಡಿತರೆಂದೇ ಖ್ಯಾತಿ ಪಡೆದ ಪೆರ್ಲ ಕೃಷ್ಣ ಭಟ್ಟರ ಅಭಿನಂದನ ಗ್ರಂಥ. ವ್ಯಕ್ತಿ ದರ್ಶನ, ಕಲಾದರ್ಶನ, ವೈವಿಧ್ಯದರ್ಶನ ಎಂಬ ಮೂರು ಭಾಗಗಳಿವೆ. ಮೊದಲ ಎರಡು ಭಾಗಗಳಲ್ಲಿ ಶ್ರೀ ಕೃಷ್ಣ ಭಟ್ಟರ ಸಾಧನೆ ಸಿದ್ಧಿಗಳ ಪರಿಚಯವಿದೆ. ಮೂರನೆಯ ಭಾಗದಲ್ಲಿ ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದ ವೈವಿಧ್ಯಪೂರ್ಣ ಲೇಖನಗಳಿವೆ.

**ಸ್ವರ್ಣಕಮಲ**

ಸಂ. ಮುಳಿಯ ಮಹಾಬಲ ಭಟ್ಟ
ಪ್ರ. ಅರ್ಕುಳ ಸುಬ್ರಾಯಾಚಾರ್ಯ ಸ್ಮಾರಕ ಸಮಿತಿ, ಮಂಗಳೂರು
ಪ್ರ. 1988 ಪು. 437

ತಾಳಮದ್ದಳೆಯ ಪ್ರಸಿದ್ಧ ಅರ್ಥಧಾರಿ ದಿ. ಅರ್ಕುಳ ಸುಬ್ರಾಯಾಚಾರ್ಯರ ಸಂಸ್ಮರಣ ಗ್ರಂಥ. 'ಜೀವೇಮ ಶರದಃ ಶತಂ' ಎಂಬ ಮೊದಲ ಭಾಗದಲ್ಲಿ 12 ಲೇಖನಗಳೂ 'ಪಶ್ಯೇಮ ಶರದಃ ಶತಂ' ಎಂಬ ಎರಡನೆಯ ಭಾಗದಲ್ಲಿ ಯಕ್ಷಗಾನದ ಬಗೆಗಿನ 37 ಲೇಖನಗಳೂ ಇವೆ. ಅವುಗಳಲ್ಲಿ ಮೂರು ಇಂಗ್ಲಿಷ್ ಲೇಖನಗಳು. ಯಕ್ಷಗಾನದ ಸಮಾಂತರ ಕಲೆಗಳ ಬಗೆಗೂ ಲೇಖನಗಳಿವೆ.

**ಹಾರಾಡಿ ರಾಮ**

ಬೈಕಾಡಿ ವೆಂಕಟಕೃಷ್ಣರಾಯ
ಐ. ಬಿ. ಎಚ್. ಪ್ರಕಾಶನ, ಬೆಂಗಳೂರು
ಪ್ರ. 1974 ಪು. 42

ಬಡಗುತಿಟ್ಟಿನ ಹಿರಿಯ ವೇಷಧಾರಿ ಹಾರಾಡಿ ರಾಮಗಾಣಿಗರ ಪರಿಚಯ ಪುಸ್ತಕ. 'ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ' ಮಾಲಿಕೆಯಲ್ಲಿ ಪ್ರಕಟಿತ. ಸರಳ ಪರಿಚಯ ಮತ್ತು ಕೆಲವು ಭಾವಚಿತ್ರಗಳಿವೆ.

**ಹಾಸ್ಯಗಾರನ ಅಂತರಂಗ**

ಅನುಭವ : ಪೆರುವಡಿ ನಾರಾಯಣ ಭಟ್ಟ
ನಿರೂಪಣೆ : ನಾ. ಕಾರಂತ ಪೆರಾಜೆ
ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು
ಪ್ರ. 2002 ಪು. 72

ಹಾಸ್ಯಗಾರ ಪೆರುವಡಿ ನಾರಾಯಣ ಭಟ್ಟರ ಆತ್ಮವೃತ್ತ. 10 ಪುಟ್ಟ ಅಧ್ಯಾಯಗಳಿವೆ. ಅನುಬಂಧದಲ್ಲಿ ಪೆರುವಡಿಯವರ ಬಗೆಗೆ ಇತರರು ಬರೆದ 14 ಚಿಕ್ಕ ಚಿಕ್ಕ ಲೇಖನಗಳಿವೆ. ಹಲವು ಭಾವಚಿತ್ರ ವರ್ಣಚಿತ್ರಗಳಿವೆ.